International Journal of Kannada Research 2023; 9(1): 246-252

International Journal of Kannada Research
www.kannadajournal.com

ISSN: 2454–5813
IJKR 2023; 9(1): 246-252
© 2023 IJKR
www.kannadajournal.com
Received: 28-12-2022
Accepted: 30-01-2023

**Dr. Mudalagiriyaiah**
Professor in Kannada
Department of P G Studies in Kannada, I.D.S.G.Govt College
Chikkamagaluru, Karnataka, India

**Corresponding Author:**
**Dr. Mudalagiriyaiah**
Professor in Kannada
Department of P G Studies in Kannada, I.D.S.G.Govt College
Chikkamagaluru, Karnataka, India

# ಕನ್ನಡ ಕಾದಂಬರಿಗಳಲ್ಲಿ ಗಾಂಧೀವಾದದ ಪರಿಭಾಷೆಗಳು

## Dr. Mudalagiriyaiah

**ಪೀಠಿಕೆ**

ಗಾಂಧೀವಾದವು ಸ್ವಾತಂತ್ರ್ಯ ಚಳುವಳಿಯ ನಾಯಕರಾದ ಗಾಂಧೀಯವರ ರಾಜಕೀಯ ಸಾಮಾಜಿಕ ಆರ್ಥಿಕ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ರೂಪುಗೊಂಡು ದೇಶಿಯತೆಯ ಪರಿಕಲ್ಪನೆಯನ್ನು ಒಳಗೊಂಡಿದೆ. ಗಾಂಧೀ ವಿಚಾರಗಳು ಸ್ವಾತಂತ್ರ್ಯಚಳುವಳಿಯ ಆಂದೋಲನದ ಸಂದರ್ಭದಲ್ಲಿ ಇಡೀ ಭಾರತೀಯ ಸಮುದಾಯದ ಮೇಲೆ ಪ್ರಭಾವ ಬೀರಿವೆ. ಗಾಂಧೀ ಬ್ರಿಟಿಷ್ ಪ್ರಭುತ್ವವನ್ನು ಕೊನೆಗಾಣಿಸುವ ಹೋರಾಟವನ್ನು ೧೯೧೯ ರಿಂದ ಪ್ರಾರಂಭಿಸಿದರು. ಅವರು ಹೋರಾಟ ಮಾಡಿದ ಕಾಲಘಟ್ಟವನ್ನು ಚರಿತ್ರಕಾರರು ಗಾಂಧಿಯುಗವೆಂದು ಗುರುತಿಸುತ್ತಾರೆ. ಅವರ ತಾತ್ವಿಕ ಗ್ರಹಿಕೆಗಳನ್ನೊಳಗೊಂಡ ವಿಚಾರಗಳನ್ನು ಗಾಂಧೀವಾದವೆಂದು ಅವರ ಅನುಯಾಯಿಗಳು ಭಾವಿಸಿಕೊಳ್ಳುತ್ಥಾರೆ ಮತ್ತು ಕರೆಯುತ್ತಾರೆ ಹಾಗೆಯೇ ದೇಶಿವಾದಿ ಚಿಂತಕರು ಸಹ ಗ್ರಹಿಸಿ ಕೊಳ್ಳುತ್ತಾರೆ. ಅವರು ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಮೌಲ್ಯಾತ್ಮಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು ಅವುಗಳ ಮೂಲಕ ರೂಪುಗೊಂಡ ಚಿಂತನೆ ಮತ್ತು ಪರಿಭಾಷೆಗಳನ್ನು ಚಿಂತಕರು, ಚಳುವಳಿಯ ನಾಯಕರು, ಬರಹಗಾರರು, ಸಾಹಿತಿಗಳು, ರಾಜಕಾರಣಿಗಳು ಮತ್ತು ಸಮಾಜದ ಜನಸಾಮಾನ್ಯರು ಗಾಂಧೀವಾದದ ತಾತ್ವಿಕ ಗ್ರಹಿಕೆಗಳೆಂದು ಗುರುತಿಸಿಕೊಳ್ಳುತ್ತಾರೆ.

ಗಾಂಧಿವಾದದ ಪರಿಭಾಷೆಗಳಾದ ಸತ್ಯ–ಅಹಿಂಸೆ, ಗ್ರಾಮ ಸ್ವರಾಜ್ಯ ಕಲ್ಪನೆ, ಸರ್ವೋದಯ ಮತ್ತು ಚಳುವಳಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡ ಸತ್ಯಾಗ್ರಹ, ವಿದೇಶಿ ವಸ್ತು ಬಹಿಷ್ಕಾರ, ಪಿಕೆಟಿಂಗ್ ಪಾನನಿರೋಧ, ಸ್ತ್ರೀ ವಿಮೊಚನೆ ಮುಂತಾದವುಗಳು ಭಾರತ ದೇಶವು ಬ್ರಿಟೀಷರ ವಿರುದ್ಧ ಹೋರಾಟ ಮಾಡುವ ಸಂದರ್ಭದಲ್ಲಿ ಹುಟ್ಟಿಕೊಂಡಂತಹವುಗಳು ಈ ಪರಿಭಾಷೆಗಳು ಪೂರ್ವಾವಾದ ಮತ್ತು ಪಶ್ಚಿಮವಾದಗಳ ನಡುವಿನ ತಾತ್ವಿಕ ಮಥಿತಾರ್ಥದ ನೆಲೆಯಲ್ಲಿ ಬೆಳವಣಿಗೆ ಪಡೆದಂತವುಗಳ. ಈ ಪರಿಭಾಷೆಗಳು ಭಾರತೀಯ ಸಾಮಾಜಿಕ ಮತ್ತು ಆರ್ಥಿಕ ರಂಗಗಳ ಸುದಾರಣಾ ಚಳುವಳಿಯ ಸ್ವರೂಪ ಪಡೆದುಕೊಂಡು ರಚನಾತ್ಮಕ ಕಾರ್ಯಗಳಾಗೆ ಬೆಳಕಿಗೆ ಬಂದಿವೆ. ಗಾಂಧೀವಾದವು ಈ ಪರಿಭಾಷೆಗಳನ್ನು ಆಂತರಿಕ ಮೌಲ್ಯಗಳೆಂದು ಭಾವಿಸುತ್ತದೆ.

ಭಾರತದ ಸ್ವಾತಂತ್ರ್ಯ ಚಳುವಳಿಯನ್ನು ರಾಜಕೀಯ ಚಳುವಳಿ. ಸಾಮಾಜಿಕ ಚಳುವಳಿ ಮತ್ತು ಸಾಂಸ್ಕೃತಿಕ ಚಳುವಳಿ ಎಂದು ಗ್ರಹಿಸಿಕೊಳ್ಳಬಹುದು. ಈ ಚಳುವಳಿಯು ಉಂಟುಮಾಡಿದ ಬದಲಾವಣೆ ಹೊಸದೊಂದು ವ್ಯವಸ್ಥೆಯನ್ನು ನಿರ್ಮಿಸುವ ಸಾಮೂಹಿಕ ಯತ್ನವಾಗಿದೆ. ಈ ಚಳುವಳಿ ವಿಸ್ತಾರವಾದವೈವಿಧ್ಯಮಯವಾಗಿದೆ. ಈ ಬದಲಾವಣೆ ಸುಧಾರಣೆಯಾಗಿರಬಹುದು. ಪ್ರತಿಸುಧಾರಣೆಯಾಗಿರಬಹುದು ಅಥವಾ ಕ್ರಾಂತಿಕಾರಿ ಸ್ವರೂಪದ್ದಾಗಿರಬಹುದು ಇದನ್ನು ಸಮಾಜಶಾಸ್ತ್ರಜ್ಞರು ಈ ಪರಿಣಾಮಗಳನ್ನು ಎರಡು ಬಗೆಯಲ್ಲಿ ಗುರುತಿಸುತ್ತಾರೆ. "೧. ಕಾರ್ಯಶೀಲ (functional) ೨. ಕಾರ್ಯವಿಹಿನ (disfunctional). ಕಾರ್ಯ ಶೀಲವೆಂದರೆ ಹಾಲಿ ಇರುವ ವ್ಯವಸ್ಥೆಗೆ ಅದರ ಸ್ಥಿರತೆಗೆ ಬೆಂಬಲ ನೀಡುವುದು.

ಕಾರ್ಯವಿಹೀನವೆಂದರೆ ವ್ಯವಸ್ಥೆಯನ್ನು ಕಲಕುವ ಸ್ವರೂಪ. ಈ ಎರಡರ ಪರೀಣಾಮಗಳು ಪುರೂಗಾಮಿಯಾಗಿರಬಹುದು. ಇಲ್ಲ. ಪ್ರತಿಗಾಮಿಯಾಗಿರಬಹುದು"[೧] ಗಾಂಧೀವಾದವನ್ನು ಈ ಎರಡು ಅಂಶಗಳ ಮೂಲಕ ಸ್ವಾತಂತ್ರ್ಯ ಚಳುವಳಿಯ ಜೊತೆಯಲ್ಲಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದಾಗ ಗಾಂಧೀವಾದದ ಪರಿಭಾಷೆಗಳ ಅರ್ಥವಂತಿಕೆಯ ಸ್ವರೂಪವು ಕಾಣುತ್ತದೆ.

ಕಾರ್ಯಶೀಲವನ್ನು ದೇಶಿವಾದದ ಹಿನ್ನೆಲೆಯಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಗ್ರಹಿಸಿಕೊಂಡು ಗಾಂಧಿವಾದದ ಪರಿಭಾಷೆಗಳನ್ನು ಅರ್ಥೈಸಿಕೊಳ್ಳುವುದು ಒಂದು ರೀತಿಯ ಕ್ರಮವಾದರೆ.

ಕಾರ್ಯವಿಹೀನವನ್ನು ವಸಾಹತುಶಾಹಿಯ ಪ್ರಭುತ್ವವು ಹೇಗೆ ಗಾಂಧಿವಾದದ ಪರಿಭಾಷೆಗಳ ಹುಟ್ಟಿಗೆ ಕಾರಣವಾಗಿದೆ ಅನ್ನುವುದು ಮತ್ತೊಂದು ರೀತಿಯ ಕ್ರಮವಾಗಿದೆ. ಒಂದು "ವಸಾಹತುದೇಶಗಳ ಚರಿತ್ರೆಯನ್ನು ಬೆದರುವ ವಸಾಹತುಶಾಹಿ ಒಂದು ಬಗೆಯ ಕತರ್ಕ ವಿತರ್ಕಗಳ ಮೂಲಕ ಆ ಚರಿತ್ರೆಯನ್ನು ಕುರೂಪಗೊಳಿಸುತ್ತದೆ.ನಾಶಮಾಡುತ್ತದೆ"[೨] ಎಂದು ಫ್ರಾಂಟ್ಸ್ ಫ್ಯಾನನ್ ಹೇಳುತ್ತಾನೆ. ತನಗೆ ಚಾರಿತ್ರಿಕವಾಗಿ ಸಾಧ್ಯವಾಗಿರುವ ಮುಂದಾಳುತನದ ಕಾರಣದಿಂದ ಪಶ್ಚಿಮವು ಒಂದು ಪೂರ್ವ ಕಲ್ಪಿಸಿಕೊಂಡು ಪೂರ್ವಾವಾದ (Orientalism) ವನ್ನು ಸೃಷ್ಟಿಸಿತು. ಇದು ಗ್ರಾಮ್ಯ, ನಾಗರೀಕ ಮತ್ತು ರಾಜಕೀಯ ಸಮಾಜಗಳ ನಡುವಿನ ಸಂಸ್ಕೃತಿಯನ್ನು ಮತ್ತು ಕೆಲವು ವಿಚಾರಗಳನ್ನು ನಿರ್ಧಿಷ್ಟ ಕಾಲದಲ್ಲಿ ಪ್ರಾಮುಖ್ಯತೆ ಪಡೆದುಕೊಳ್ಳುವಂತೆ ಮಾಡಿತು. ಇದನ್ನು ಗಾಂಧಿವಾದದ ಮುಂದಾಳತ್ವದ ಮಾದರಿಕ್ರಮವೆಂದು ಗ್ರಹಿಸಬಹುದು. ಗಾಂಧಿ ದೇಶಿವಾದದ ನೆಲೆಯಲ್ಲೇ ತಮ್ಮ ತಾತ್ವಿಕ ಅಭಿಪ್ರಾಯಗಳನ್ನು ಮಂಡಿಸುವುದರಿಂದ ಗಾಂಧೀವಾದವು ಸಾಂಸ್ಕೃತಿಕ ನಾಯಕತ್ವದ ರೂಪವನ್ನು ಮತ್ತು ಗ್ರಾಮ್ಯ ಮುಂದಾಳತ್ವವನ್ನು (Hegemony) ಪಡೆದುಕೊಂಡಿದೆ. ಪಶ್ಚಿಮದ ವಿಜ್ಞಾನದ ನೆಲೆಯಲ್ಲೇ ಹುಟ್ಟಿದ ದೇಶಿವಾದ ಅರ್ಥಾತ್ ಗಾಂಧೀವಾದ ಸಂಸ್ಕೃತಿಯನ್ನು ಶೋಧಿಸುವ ಅವಿಷ್ಕರಿಸುವ ಮತ್ತು ಚಾರಿತ್ರಿಕವಾಗಿ ದಾಖಲೆಯಾಗಿ ನಿರೂಪಿಸುವ ಕ್ರಮವಾಗಿದೆ.

ಭಾರತಕ್ಕೆ ಬ್ರಿಟೀಷರು ಬರುವ ಮೊದಲು ಚಲನಹೀನವಾದ ಸಮಾಜ. ವಸಾಹತುಶಾಹಿ ಪ್ರವೇಶ ಮಾಡಿದ ಕೂಡಲೇ ದೇಶಿ ಸಂಸ್ಕೃತಿಯಲ್ಲಿ ಬದಲಾವಣೆಗಳುಂಟಾದವು. ಅವು ಭಾರತೀಯ ಸುಧಾರಣಾವಾದಿಗಳ ಮೇಲೆ ಪೂರ್ವ ಮತ್ತು ಪಶ್ಚಿಮಗಳ ನಡುವೆ ಉಂಟಾದ ಸಮನ್ವಯತೆ ರಾಜಕೀಯ, ಸಾಮಾಜಿಕ, ಮತ್ತು ಸಾಂಸ್ಕೃತಿಕ ಪ್ರಭುತ್ವದ ಬೆಳವಣಿಗೆಗೆ ಕಾರಣವಾದವು

ದೇಶಿವಾದದ ಹಿನ್ನೆಲೆಯಲ್ಲಿ ರೂಪುಗೊಂಡ ಸತ್ಯ ಅಹಿಂಸೆ ಪರಿಕಲ್ಪನೆಗಳು ವಸಾಹತುಶಾಹಿಯ ಪ್ರಭುತ್ವಕ್ಕೆ ಪ್ರತಿಕ್ರಿಯಿಸುತ್ತವೆ. ಇವು ಮೌಲ್ಯಯುತವಾದ ಮತ್ತು ಮಾನವತಾವಾದಿ ಅಂಶಗಳು ಹಾಗೂ ಮಾನವ ಕಲ್ಯಾಣಕ್ಕೆ ಅವಶ್ಯವಾದವುಗಳು ಮತ್ತು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ ಎಂದು ಗಾಂಧಿವಾದವು ಭಾವಿಸಿಕೊಳ್ಳುತ್ತದೆ. ದೇವರು ಸತ್ಯವೆನ್ನುವ ಬದಲು ಸತ್ಯವೇ ದೇವರು ಎನ್ನುವ ನೂತನ ಸತ್ಯವನ್ನು ಗಾಂಧಿವಾದವು ದೃಢಪಡಿಸುತ್ತದೆ. ಗಾಂಧೀ ತಮ್ಮ ಬದುಕಿನ ಪ್ರತಿ ಹಂತದಲ್ಲೂ ಕಾಣುವ ಪ್ರಯತ್ನವಿದೆ. ಅವರು ಸತ್ಯಕ್ಕೆ ಕೊಡುವ ವ್ಯಾಖ್ಯಾನ ನುಡಿಯುವುದು ಸತ್.ಸತ್ಯವೇ ಬದುಕಿನ ಪರಮ ತತ್ವ, ಸತ್ಯದ ಸಮ್ಯಕ್‌ದರ್ಶನವೇ ಅತ್ಮ ಸಂಸ್ಕಾರ ಅದೇ ಜೀವನದ ಅಂತಿಮ ಗುರಿ ಎನ್ನುತ್ತಾರೆ. ಅವರ experimental with the truth ಎನ್ನುವ ಕೃತಿಯಲ್ಲಿ ಸತ್ಯದ ನಮ್ರಶೋಧಕರೆಂದು ನಿರೂಪಿಸಿದ್ದಾರೆ. ಹಾಗೆಯೇ ಅಹಿಂಸೆಯನ್ನು ಗಾಂಧಿ ಹಿಂಸೆಯ ಹಲವು ರೂಪಗಳ ನೆಲೆಯಲ್ಲೇ ಅಹಿಂಸೆಗೆ ಪ್ರಾಮುಖ್ಯತೆಯನ್ನು ಕೊಡುತ್ತಾರೆ. ಅಹಿಂಸೆ ಮಾನವೀಯತೆಯನ್ನು ಉಳಿಸುವ ಮಾರ್ಗವೆಂದು ಅಹಿಂಸೆಗೆ ಹೊಸ ಅರ್ಥವನ್ನು ಕೊಡುತ್ತಾರೆ. ಸತ್ಯ ಅಹಿಂಸೆ ಸ್ವಾತಂತ್ರ್ಯ ಹೋರಾಟದ ಕಾಲಘಟ್ಟದ ಚಲಾವಣೆಯಲ್ಲಿದ್ದು. ಅವು ರಾಜಕೀಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಅರ್ಥವಂತಿಕೆಯನ್ನು ಪಡೆದುಕೊಂಡಿವೆ. ಈ ಪರಿಭಾಷೆಗಳು ಎಲ್ಲಾ ಕ್ಷೇತ್ರಗಳಿಗೂ ವ್ಯಾಪಿಸಿಕೊಂಡು. ಅವು ಶಾಂತಿಯ ಮೂಲಕ ಸ್ಥಾಯಿಯಾಗಬೇಕು ಅನ್ನುವುದು ಗಾಂಧೀವಾದದ ತಾತ್ವಿಕ ಗ್ರಹಿಕೆ. ಅಹಿಂಸೆಯ ಪರಕಲ್ಪನೆಯನ್ನು ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಪಡೆದ ಪ್ರಾಧಾನ್ಯತೆಯನ್ನು ಗಮನಿಸಿದರೆ. ನಮ್ಮ ದೇಶದ ಸ್ವಾತಂತ್ರ್ಯ ಅಹಿಂಸಾತ್ಮಕವಾಗಿ ದೊರಕಿತೆಂದು ಹೇಳಲಾಗುತ್ತದೆ. ಆದರೆ ಸ್ವಾತಂತ್ರ್ಯ ಹೋರಾಟದ ಸಂದರ್ಭಲ್ಲಿ ಸಂಭವಿಸಿದ ಕೆಲವು ಘಟನೆಗಳು ತದ್ವಿರುದ್ಧ ನಿಲುವನ್ನು ನಿರೂಪಿಸುತ್ತವೆ. ಹೀಗೆಂದ ಕೂಡಲೇ ನಮ್ಮ ದೇಶದ ಜನರೆಲ್ಲರೂ ಶಸ್ತ್ರ ಹೋರಾಟ ನಡೆಸಿ ಸ್ವಾತಂತ್ರ್ಯ ಪಡೆದರೆಂದು ಭಾವಿಸಬೇಕಾಗಿಲ್ಲ. ಆದರೆ ಬ್ರಿಟೀಷ್ ಪ್ರಭುತ್ವವು ಹಿಂಸೆಯ ಆಡಳಿತದಿಂದ ಉಂಟಾದ ಹಿಂಸೆಗೆ ಮತ್ತು ನಡೆದ ಘಟನೆ (ಉದಾ. ಜಲಿಯನ್ ವಾಲಾಬ್‌ಗ್ ಹತ್ಯಾಕಾಂಡ) ಗಳಿಂದ ಪ್ರೇರಿತವಾದ ಜನರು ಹಿಂಸೆಗೆ ಅಣಿಯಾದ ಉದಾಹರಣೆಗಳು ಬಹಳಷ್ಟಿವೆ. ಆದರೂ ಹಿಂಸೆ ಹಿಂಸೆಗಳು ವಿರುದ್ಧಾತ್ಮಕ ಪ್ರಕ್ರಿಯೆಯಲ್ಲಿ ಪಾಲುಗೊಳ್ಳುತ್ತವೆ. ಅನ್ನುವುದು ಚಾರಿತ್ರಿಕ ಸತ್ಯ. ಆಳುವ ವರ್ಗಕ್ಕೆ ವಿರುದ್ಧವಾಗಿ ಸಂಭವಿಸುವ ಶಸ್ತ್ರಾಸ್ತ್ರ ಪ್ರಯೋಗಗಳು ಹಿಂಸೆಯಾಗಿಯೂ ಆಳುವ ವರ್ಗವೇ ಜನರ ಮೇಲೆ ಪ್ರಯೋಗಿಸುವ ಶಸ್ತ್ರಾಸ್ತ್ರಗಳ ಶಕ್ತಿ ಸಂರಕ್ಷಣೆಯ ನೆಲೆಯಾಗಿಯೂ ಅರ್ಥ ಪಡೆದುಕೊಳ್ಳುತ್ತದೆ. ಇದು ಆಳುವ ವರ್ಗದ ದೃಷ್ಟಿಕೋನ, ಜನರು ದೊಂಬಿ ಮಾಡುವುದು, ಸಮಾಜವಿರೋಧಿ ಚುಟುವಟಿಕೆಗಳಲ್ಲಿ ತೊಡಗಿ ಪ್ರಾಣಹಾನಿ ಮಾಡುವುದು, ಸಹ ಹಿಂಸಾತ್ಮಕವೇ ಹಿಂಸೆ ಅನ್ನುವುದು ಎರಡು ಕಡೆಯಿಂದಲೂ ಸಂಭವಿಸುವಂತಹದು ಆದ್ದರಿಂದ ಗಾಂಧಿವಾದವು ಹಿಂಸೆಯನ್ನು ಹತ್ತಿಕ್ಕುವ ನೆಲೆಯಲ್ಲೇ ಅಹಿಂಸಾ ಪರಿಕಲ್ಪನೆಯನ್ನು ಅರ್ಥೈಸುತ್ತದೆ.

ಸ್ವಾತಂತ್ರ್ಯ ಚಳುವಳಿಯು ಅಹಿಂಸಾತ್ಮಕವಾಗಿ ನಡೆಯಬೇಕು ಅನ್ನುವುದು ಗಾಂದಿ ಮತ್ತು ಅನೇಕ ಸುಧಾರಣಾವಾದಿಗಳ ಕಲ್ಪನೆಯಾಗಿದೆ. ಆಗ ಅದೊಂದು ಸಿದ್ಧಾಂತವಾಗಿತ್ತು. ಸಂವೇದನೆಯಾಗಿತ್ತು. ಆದರೆ ವಸ್ತುಸ್ಥಿತಿಯನ್ನು ಗಮನಿಸಿದರೆ ಅದು ಭಿನ್ನ ಸ್ವರದಲ್ಲೇ ಇತ್ತು. ಶಸ್ತ್ರ ಹೊರಾಟದ ಸಿದ್ಧಾಂತವೂ ಅಸ್ತಿತ್ವದಲ್ಲಿತ್ತು. ಸೈದ್ಧಾಂತಿಕವಾಗಿಯೂ ಮತ್ತು ಭಾವನಾತ್ಮಕವಾಗಿಯೂ ಹಿಂಸಾತ್ಮಕ ಪ್ರತಿಕ್ರಿಯೆಗಳು ಮತ್ತು ಪ್ರತಿಭಟನೆಗಳು ನಡೆದ ಉದಾಹರಣೆಗಳು ಬಹಳಷ್ಟಿವೆ. ಅಂಚೆ ಕಛೇರಿ, ಖಜಾನೆ ಮತ್ತು ರೈಲ್ವೆಗಳಿಗೆ ಮುತ್ತಿಗೆ ಹಾಕಿದು ನಡೆದಿದೆ. ಆಗ ಸಾವು ನೋವುಗಳು ಸಾಕಷ್ಟು ಸಂಭವಿಸಿರುವುದನ್ನು ಇತಿಹಾಸಕಾರರು ಗುರುತಿಸಿದ್ದಾರೆ. ಕನ್ನಡ ಸಾಹಿತ್ಯದ ಬರಹಗಾರರೂ ಸಹ ತಮ್ಮ ಕೃತಿಗಳಲ್ಲಿ ತಂದಿದ್ದಾರೆ, ಬಸವರಾಜಕಟ್ಟಿಮನಿ ಅವರ 'ಮಾಡಿ ಮಡಿದವರು' ವಸಾಹತುಶಾಹಿ ಪ್ರಭುತ್ವವನ್ನು ನಿರ್ಬಲಗೊಳಿಸಲು ಇಂಥ ಚಟುವಟಿಕೆಗಳನ್ನು ಒಳಗೊಂಡಿದೆ ಹೀಗೆ ಸಾಮ್ರಾಜ್ಯಶಾಹಿ ಪ್ರಭುತ್ವವಾದ ಆಳುವ ವರ್ಗದ ಉಗ್ರಗಾಮಿ ಹಿಂಸೆಗೆ ವಿರುದ್ಧವಾಗಿ ಜನಾಂದೋಲನ ಹಿಂಸೆ ಪ್ರಖರಗೊಳ್ಳುತ್ತಿದ್ದುದರಿಂದಲೇ ಗಾಂಧೀಜಿ ಅಹಿಂಸಾ ಹೋರಾಟದ ಪರಿಕಲ್ಪನೆಯನ್ನು ಪ್ರತಿಪಾದಿಸಿದರು.

ಗಾಂಧಿ ಪ್ರತಿಪಾದಿಸಿದ ಅಹಿಂಸಾ ಹೋರಾಟದ ಚಳುವಳಿ ಹಿಂಸೆ–ಅಹಿಂಸೆಗಳ ನಡುವೆ ಸಮತೊಲನವನ್ನು ಸಾಧಿಸಿದೆ ಮತ್ತು ನಮ್ಮ ದೇಶದ ಸ್ವಾತಂತ್ರ್ಯ ಹೋರಾಟವನ್ನು ಹಿಂಸೆ ಅಹಿಂಸೆಗಳ ಮಿಶ್ರರೂಪದಲ್ಲಿ ರೂಪುಗೊಂಡಿತ್ತು ಅನ್ನುವುದು ಬಹುಮುಖ್ಯವಾದ ಅಂಶವಾಗಿದೆ.

'ಚರಕ' ಗಾಂಧಿ ಕೊಟ್ಟ ಪರಿಭಾಷೆಯಾಗಿದೆ. ಚರಕವನ್ನು ದೇಶಿವಾದದ ಹಿನ್ನೆಲೆಯಲ್ಲಿ ಗ್ರಾಮೀಣ ಸಂಸ್ಕೃತಿಯನ್ನು ಆರ್ಥಿಕ ಮೂಲದಿಂದ ಅಭಿವೃದ್ದಪಡಿಸುವ ಒಂದು ಸಾಧನವಿದೆ. ವಸಾಹತುಶಾಹಿ ಬೆಳವಣಿಗೆಯಲ್ಲಿ ರೂಪುಗೊಂಡ ಯಂತ್ರ ಸಂಸ್ಕೃತಿಯನ್ನು ವಿರೋಧಿಸುವ ಪರಿಕಲ್ಪನೆಯಾಗಿದೆ. ಬೃಹತ್‌ಯಂತ್ರ ಸಂಸ್ಕೃತಿಯಿಂದ ದೇಶಿಯ ಗ್ರಾಮೀಣ ಸಂಸ್ಕೃತಿಯ ಮೇಲೆ ಮಾಡುವ ಪರಿಣಾಮಗಳನ್ನು ಅರಿತು ಗ್ರಾಮೀಣ ಸಂಸ್ಕೃತಿಯನ್ನು ಪ್ರತಿಬಿಂಬಿಸು ಸಂಕೇತವಾಗಿಯೂ ಇದೆ. ಇದು ದೈಹಿಕ ಶ್ರಮವನ್ನು ಬಯಸುವುದರಿಂದ ಚರಕ ಶರೀರ ಜ್ಞಾನವೇ ಸ್ವದೇಶಿ ಹೆಗ್ಗುರುತು.

ದೈಹಿಕ ಶ್ರಮವಿಲ್ಲದೆ ಆಹಾರ ತಿನ್ನುವುದು ಕದ್ದು ತಿಂದಂತಾಗುತ್ತದೆ ಎಂದು ಗಾಂಧಿ ಹೇಳುತ್ತಾರೆ. ಗಾಂಧಿ ಚರಕದ ಉದ್ದೇಶವನ್ನು 'ಯಂಗ್ ಇಂಡಿಯ' (young India) ದಲ್ಲಿ ೧೯೨೧ ಕ್ಕಿಂತ ಮುಂಚೆ ಪ್ರಸ್ತಾಪಿಸಿದ್ದಾರೆ. ನಮ್ಮ ದೇಶದ ಶಾಂತಿಯತ ನಾಗರಿಕತೆಯಳಿಯುವುದಕ್ಕೆ ಚರಕ ಮತ್ತು ಕೈಮಗ್ಗಗಳು ದೇಶಿಯತೆಯ ಪರಿಕಲ್ಪನೆಗೆ ರೂಪಕಗಳಾಗುತ್ತವೆ. ಇವು ದೂರವಾಗಿರುವುದರಿಂದ ಗ್ರಾಮೀಣ ಜನರ ಬದುಕು ಆರ್ಥಿಕವಾಗಿ ದುಸ್ತರವಾಗಿದೆ ಎಂದು ಗಾಂಧೀ ಭಾವಿಸುತ್ತಾರೆ.

ಹರಿಜನ ಅಸ್ಪೃಶ್ಯತಾ ನಿವಾರಣೆ ಪರಿಕಲ್ಪನೆಗಳು ಒಂದಕ್ಕೊಂದು ಆಂತರಿಕ ಸಂಬಂಧವಿದೆ. 'ಹರಿಜನ' ಪ್ರತ್ರಿಕೆಯ ಮೂಲಕ ಒಂದು ಜನಾಂಗದ ಅಂದರೆ ಶೋಷಣೆಗೆ ಒಳಗಾದ ದಲಿತೀಯರನ್ನು ಗಾಂಧಿ ಹರಿಜನರೆಂದು ಕರೆಯುತ್ತಾರೆ. ಹರಿಜನ ಅನ್ನುವ ಪರಿಕಲ್ಪನೆಯು 'ಹರಿಜನ' ಪದದ ಬಳಕೆ ಗಾಂಧೀಜಿಯವರು ಹೊಸದಾಗಿ ತಂದುದಲ್ಲ ಇದು ಹರಿದಾಸರು ೧೭ನೇ ಶತಮಾನದಲ್ಲಿ ಕೊಟ್ಟ ಹೆಸರು. ಅದನ್ನು ಮರಳಿ ಬಳಕೆಗೆ ಗಾಂಧಿ ತಂದರು ೧೭ನೇ ಶತಮಾನದಲ್ಲಿ ಮಹಾರಾಷ್ಟ್ರದ ಜಾಗೃತಿ ಚಳುವಳಿ ಹುಟ್ಟಿ ಹಾಕಿದ ಶಿವಾಜಿ ಮಹಾರಾಜರಿಂದ ಹಿಂದೂ ಸಾಮ್ರಾಜ್ಯ ಪ್ರತಿಷ್ಠಾಪನೆಯಾಗುವ ಸಂದರ್ಭದಲ್ಲಿ ಹೊಲೆಯ, ಮಾದಿಗ, ಚಮ್ಮಾರ ಬೇಡ ಮುಂತಾದ ಜಾತಿಯ ಜನರನ್ನು ದಲಿತರು ಹಿಂದೂ ಸಾಮ್ರಾಜ್ಯ ಕಟ್ಟಲು ಎಲ್ಲರ ಜೊತೆಯಲ್ಲಿ ನಿಂತು ಸರಿಸಮವಾಗಿ ಸಮರಾಂಗಣದಲ್ಲಿ ಹೋರಾಡಿದರು. ಇದಕ್ಕೆ ಪ್ರತಿಯಾಗಿ ದಲಿತರನ್ನು ಮೇಲೆತ್ತಬೇಕು ಎಂಬ ಭಾವನೆಯಿಂದ 'ಹರಿಜನ' ಎಂಬ ಹೆಸರನ್ನು ಕೊಟ್ಟರು. ಈ ಬಯಕೆ ಬಯಕೇಯಾಗಿಯೇ ಕರಗಿ ಹೋಯಿತು. ಕೇಶವದಾಸರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಆದರೆ ಹರಿಜನ ಎನ್ನುವ ಪರಿಭಾಷೆಯು ಸುಧಾರಣಾವಾದಿ ನೆಲೆಗಳನ್ನೊಳಗೊಂಡ ಕೃತಿಗಳಾದ ಹೇಮಾವತಿ, ಭಾರತೀಪುರ. ಸಂಸ್ಕಾರ ಮುಂತಾದ ಕಾದಂಬರಿಗಳು ಅಸ್ಪೃಶ್ಯತಾ ಕಲ್ಪನೆಯ ನೆಲೆಗಳನ್ನು ಸುಧಾರಣಾವಾದಿ ನೆಲೆಯಲ್ಲಿ ಗಾಂಧಿವಾದದ ಪರಿಕಲ್ಪನೆಯನ್ನು ಸಾಧಿಸುವ ಮತ್ತು ಲೋಹಿಯವಾದದ ಸುಧಾರಣಾವಾದಿ ಪ್ರತಿಕ್ರಿಯೆಗಳನ್ನು ಕಾಣುತ್ತೇವೆ.

'ಗ್ರಾಮ ಸ್ವರಾಜ್ಯ ಕಲ್ಪನೆ' ಈ ಪರಿಭಾಷೆಯು ದೇಶಿವಾದದ ಹಿನ್ನಲೆಯಲ್ಲಿ ರೂಪುಗೊಂಡಿದೆ. ಗಾಂಧಿವಾದವನ್ನು ದೇಶಿವಾದವೆಂದು ಪರಿಗ್ರಹಿಸಬೇಕಾದರೆ ಗ್ರಾಮಸ್ವರಾಜ್ಯ ಕಲ್ಪನೆಯನ್ನು ಮೊದಲು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಭಾರತದ ಗ್ರಾಮತತ್ವ ಅಥವಾ ಗ್ರಾಮಿಣತತ್ವ ಪರಿಕಲ್ಪನೆಯೊಂದು ಗಾಂಧೀಯ ಸುಪ್ತಪ್ರಜ್ಞೆಯಲ್ಲೆಲ್ಲೂ ಈ ಮೊದಲೇ ಬೀಜ ರೂಪದಲ್ಲಿ ಹುದುಗಿ ಕುಳಿತಿತ್ತು ಅನ್ನಿಸುತ್ತದೆ. ಗ್ರಾಮಭಾರತದ ಮಣ್ಣಿನ ಸಂಪರ್ಕಕ್ಕೆ ಬಂದಾಕ್ಷಣ ಆ ಬೀಜ ಮೊಳೆಯಲಾರಂಬಿಸಿತು. ಹೊಸಹುಟ್ಟು ಪಡೆದುಕೊಂಡಿತು. ಗಾಂಧೀ ವೈಯಕ್ತಿಕವಾಗಿ ಹಳ್ಳಿಗನಾಗದಿದ್ದರೂ; ಆ ಹಳ್ಳಿಯ ಸೊಗಡಿನ ಭಾವಪರಿಕಲ್ಪನೆ ತತ್ವ ಪ್ರಜ್ಞೆಯಾಗಿದೆ. "ಅವರ ಸಮುದಾಯ ಸಂಸ್ಕೃತಿ ಇತಿಹಾಸಗಳ ಒಂದು ಗುಪ್ತಗಾಮಿ ಅಂಶವಾಗಿ ಅವರ ವ್ಯಕ್ತಿತ್ವದ ಆಳದಲಿ ಅಂತರ್ಗತವಾಗಿ ಸೇರಿಹೋಗಿತ್ತು."[೩] ಗಾಂಧೀವಾದದ ಗ್ರಾಮಸ್ವರಾಜ್ಯ ಕಲ್ಪನೆ ಬಗ್ಗೆ ಗಾಂಧಿ "ಭಾರತದ ಹಳ್ಳಿಯನ್ನು ಕಂಡುಕೊಂಡುರು ಎನ್ನುವುದಕ್ಕಿಂತ ಭಾರತದ ಹಳ್ಳಿ ಗಾಂಧೀಯ ಮೂಲಕ ತನ್ನನ್ನು ತಾನು ಪುನ ಕಂಡುಕೊಂಡಿತು ಅನ್ನವುದೇ ಹೆಚ್ಚು ಸತ್ಯವೆನ್ನುತ್ತಾರೆ"[೪] ಆಶೀಸ್ ನಂದಿಯವರು ಗ್ರಾಮೀಣ ಸಾಂಸ್ಕೃತಿಕ ಬೆಳವಣಿಗೆಗಳಲ್ಲಿ ಉಂಟಾಗಿರುವ ಆರ್ಥಿಕ, ರಾಜಕೀಯ ಪಲ್ಲಟಗಳನ್ನು ಅರ್ಥೈಸಲು ತೊಡಗಿದಾಗ ತಾತ್ವಿಕ ವಿಚಾರಗಳು ಮುರಿದುಬಿಳುತ್ತವೆ. ಗಾಂಧಿ ಕಂಡ ಗ್ರಾಮ ಸ್ವರಾಜ್ಯ ಕಲ್ಪನೆಯೇ ಬೇರೆಯಗುತ್ತದೆ. ಅಂಬೇಡ್ಕರ್ ಬಯಸಿದ ಗ್ರಾಮೀಣ ಜೀವನದ ಪರಿಕಲ್ಪನೆಯೇ ಬೇರೆ ಲೋಹಿಯ ಮತ್ತು ಪೆರಿಯಾರ್ ಕಂಡ ಕನಸಿನ ಹಳ್ಳಿಗಳೇ ಬೇರೆ, ಇದಕ್ಕೆ ಕಾರಣವನ್ನು ಹುಡುಕಿದಾಗ ಎರಡು ಕಾರಣಗಳು ಕಾಣುತ್ತವೆ. ೧. ಸ್ವಾರ್ಥ ರಾಜಕೀಯ, ೨ ನವ ವಸಾಹತುಶಾಹಿ ಅಕ್ರಮ. ಈ ಎರಡು ಕಾರಣಗಳು ಗ್ರಾಮೀಣ ಬದುಕಿನ ಪಲ್ಲಟಗಳನ್ನು ತೊರಿಸುವುದಲ್ಲದೆ ದೇಶಿವಾದಕ್ಕೆ ಪ್ರಾಮುಖ್ಯತೆಯನ್ನು ಕೊಡುತ್ತದೆ.

ಗಾಂಧೀವಾದದ ಪರಿಭಾಷೆಗಳಾದ ಸತ್ಯಾಗ್ರಹ, ಹರತಾಳ, ಸಮಾಜ ಬಹಿಷ್ಕಾರ, ವಿದೇಶಿ ಮತ್ತು ಬಹಿಷ್ಕಾರ ಪಿಕೆಂಟಿಗ್ ಮತ್ತು ಉಪವಾಸ ಇವು ಅಸಹಕಾರ ಚಳುವಳಿಯ ನೆಲೆಯಲ್ಲಿ ಹುಟ್ಟಿಕೊಂಡಂತವುಗಳು. ಇವು ವಸಾಹತುಶಾಹಿ ಪ್ರಭುತ್ವಕ್ಕೆ ಪ್ರತಿಕ್ರಿಯಾಗಳಾಗಿ ದೇಶೀವಾದದ ಅಂದರೆ ದೇಶಿಯತೆ ಅನ್ನುವ ಪರಿಕಲ್ಪನೆಯ ಮೇಲೆ ನಿರೂಪಿತಗೊಂಡಂತವುಯಗಳು. ಗಾಂಧೀವಾದದ ಪ್ರಕಾರ ಸತ್ಯಾಗ್ರಹವೆಂದರೆ ಸತ್ಯಾಗ್ರಹಿಯು ಸತ್ಯಕ್ಕಾಗಿ ಆಗ್ರಹಿಸುವುದು ಎಂದರ್ಥ, ಇದು ಗಾಂಧೀವಾದದ ಹೃದಯ ಭಾಗವಾಗಿದೆ. ದಬ್ಬಾಳಿಕೆ ಅನ್ಯಾಯ ದುರಾಡಳೀತ ಮುಂತಾದವುಗಳನ್ನು ಪ್ರೀತಿ, ವಿಶ್ವಾಸಗಳಿಂದ ಗೆಲ್ಲಬಹುದು. ಕೆಲವೊಮ್ಮೆ ಸಮಾಜದಲ್ಲಿ ಸಮಾಜಬಾಹಿರ ಕೃತ್ಯಗಳನ್ನು ಸತ್ಯಾಗ್ರಹದಿಂದ ಪಡೆದು ಸಮಾಜ ಹಾಗೂ ರಾಷ್ಟ್ರದ ಸಮಗ್ರ ಪ್ರಗತಿಗೆ ಅಂದರೆ ಸರ್ವೋದಯಾಕ್ಕಾಗಿ ಶ್ರಮಿಸುವುದು ಎಂದು ಗಾಂಧಿ ಭಾವಿಸುತ್ತಾರೆ. ಈ ಸತ್ಯಾಗ್ರಹದ ಪರಿಕಲ್ಪನೆಯು ಪುರಾತನವಾದುದು, ಏಸು ಕ್ರಿಸ್ತ ಬುದ್ಧ ಮತ್ತು ಮಹಾವೀರ ಮೊದಲಾದವರು ಪ್ರೀತಿ, ಸಹನೆ, ಅಹಿಂಸೆಯ ಮೂಲಕ ಗುರಿಸಾಧನೆ ಮಾಡುವಂತಹ ಪರಿಕರಳೆಂದು ಗಾಂಧಿವಾದವು ಗ್ರಹಿಸಿಕೊಂಡಿದೆ.

ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಅಸಹಕಾರ ಚಳುವಳಿ ಗಾಂಧಿ ನಾಯಕತ್ವದಲ್ಲಿ ರೂಪುಗೊಂಡ 'ಹರತಾಳ'ವು ಒಂದು ಹೊಸ ಪರಿಕಲ್ಪನೆಯಾಗಿದೆ. ಹರತಾಳವೆಂದರೆ "ಅನ್ಯಾಯ ದಬ್ಬಾಳಿಕೆ ದುರಾಡಳಿತ ನಡೆಸುವವರ ಮನಸ್ಸನ್ನು ಬದಲಾಯಿಸುವಂತೆ ಮಾಡಲು ತಮ್ಮ ತಮ್ಮ ಕೆಲಸವನ್ನು ನಿಲ್ಲಿಸಿ ಪ್ರತಿಭಟಿಸುವುದು" ಸರಕಾರ, ಅಧಿಕಾರಿ ಈ ಅಸ್ತ್ರವನ್ನು ಬಳಸದಂತೆ ವಿರೋಧ ವ್ಯಕ್ತಪಡಿಸಿದರೆ ಹಿಂಸಾಕೃತ್ಯದಲ್ಲಿ ತೊಡಗದಂತೆ ಎಚ್ಚರಿಕೆ ನೀಡಬೇಕು ಎಂದು ಗಾಂಧಿ ಹೇಳುತ್ತಾರೆ. 'ಸಮಾಜ ಬಹಿಷ್ಕಾರ' ವಿದೇಶಿ ವಸ್ತು ಬಹಿಷ್ಕಾರವೆಂದರೆ ಸ್ವಹಿತ ಸಾಧನೆಗೆ ಯತ್ನಿಸಿದ ವ್ಯಕ್ತಿಗೆ ಹಾಗೂ ಸಾಮಾಜಿಕ ಪ್ರತಿಭಟನೆಯಲ್ಲಿ ಪಾಲುಗೊಳ್ಳದಂತಹ ವ್ಯಕ್ತಿಗಳಿಗೆ ಸಮಾಜ ಬಹಿಷಾರವನ್ನು ಹಾಕಬೇಕು. ಆದರೆ ಇದರ ಉದ್ದೇಶ ಮಾತ್ರ ವ್ಯಕ್ತಿಯ ಮನಸ್ಸನ್ನು ಪರಿವರ್ತಿಸುವಂತಿರಬೇಕು ಅನ್ನುತ್ತಾರೆ. ಪಿಕೆಂಟಿಗ್ ಅಂದರೆ "ಶಾಂತಿಯುತವಾಗಿ ವ್ಯಕ್ತಿ ಅಥವಾ ಅಧಿಕಾರಿ ಅಥವಾ ಸರಕಾರ ಕಾರ್ಯನಿರ್ವಹಿಸಸಲು ಸಾಧ್ಯವಾಗದಂತೆ ತಡೆಹಾಕುವುದು. ಗಾಂಧಿವಾದದ ಮತ್ತೊಂದು ಪರಿಭಾಷೆ ಎಂದರೆ 'ಉಪವಾಸ' ಇದು ಸತ್ಯಾಗ್ರಹಕ್ಕೆ ಪೂರಕವಾಗಿ ಬರುವಂತಹದು. ಅನ್ಯಾಯ, ದಬ್ಬಾಳಿಕೆ. ದುರಾಡಳಿತ ವಿರುದ್ಧ ಉಪವಾಸ ಮಾಡುವ ಮೂಲಕ ಸತ್ಯಾಗ್ರಹ ಮಾರ್ಗವನ್ನು ಅನುಸರಿಸುವುದು ಎಂದು ಅರ್ಥೈಸುತ್ತಾರೆ. ಇದನ್ನು ಪಾಲಿಸಬೆಕಾದರೆ ಪ್ರಾಮಾಣಕತೆ (Honesty,) ಶಿಸ್ತು (Discipline.) ತ್ಯಾಗ (Sacrifice) ಅಹಿಂಸೆ (Non violence) ತ್ಯಾಗದಲ್ಲೇ ಉಲ್ಲಾಸ ಕಾಣುವ ಗುಣ Cheerfulness in suffering) ಸೋಲು ಮತ್ತು ಶಿಕ್ಷೆಯನ್ನು ಅನುಭವಿಸಲು ಸಿದ್ದರಿರಬೇಕು Preparedness to suffer) ಹೀಗೆ ಗಾಂಧೀವಾದವು ಪರಿಭಾವಿಸಿಕೊಳುತ್ತದೆ. ಈ ಪರಿಕಲ್ಪನೆಗಳು ಸ್ವಾತಂತ್ರ್ಯ ಚಳುವಳಿಯಲ್ಲಿ ರಾಷ್ಟ್ರೀಯತೆ ಮತ್ತು ದೇಶಿಯತೆ ಅನ್ನುವ ಪರಿಕಲ್ಪನೆಯ ಹುಟ್ಟಿಗೆ ಕಾರಣಾವಾಗಿದೆ.

ಗಾಂದಿವಾದದ ಪರಿಭಾಷೆಗಳು ಕನ್ನಡ ಸಾಹಿತ್ಯದ ಬರಹಗಾರರ ಮೇಲೆ ಪ್ರಭಾವ ಬೀರಿರುವುದನ್ನು ಕಾಣಬಹುದು. ಆದರೆ ಪ್ರಭಾವಕ್ಕಿಂತ ಗಾಂಧಿವಾದದ ತಾತ್ವಿಕತೆಯನ್ನು ಮಾತ್ರ ಗ್ರಹಿಸಿಕೊಂಡಿದ್ದಾರೆ. ಸ್ವಾತಂತ್ರ್ಯ ಪೂರ್ವದ ಬರಹಗಾರರಾದ ಕಾರಂತ, ಅ.ನ.ಕೃ ಬಸವರಾಜ ಕಟ್ಟೀಮನಿ, ಶ್ರೀರಂಗ, ಕುವೆಂಪು ಮತ್ತು ನಿರಂಜನರ ಮೇಲೆ ಸ್ವಾತಂತ್ರ್ಯ ಹೋರಾಟದ ಪ್ರಭಾವ ಮತ್ತು ಗಾಂಧಿಯು ವಿಚಾರಗಳು ಪ್ರಭಾವಿಸಿವೆ. ಸ್ವಾತಂತ್ರ್ಯ ಚಳುವಳಿ ಮತ್ತು ಗಾಂಧಿವಾದದ ಆಶಯಗಳನ್ನು ಸ್ವೀಕರಿಸಿದ್ದಾರೆ ಈ ಬರಹಗಾರರು ನವೋದಯ ಮನೋಧರ್ಮದ ತುಡಿತವನ್ನು ಗಾಂಧಿವಾದದ ಪರಿಭಾಷೆಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ಗಾಂಧಿವಾದದ ಪರಿಭಾಷೆಗೆಳಿಗೆ ದೇಶಿಯತೆಯ ಅರ್ಥವಂತಿಕೆ ಇದೆ. ಈ ಅರ್ಥವಂತಿಕೆಯ ಮೂಲಕ ವಸಾಹತುಶಾಹಿ ಪ್ರಭುತ್ವಕ್ಕೆ ಪ್ರತಿಕ್ರಿಯೆ ಮಾಡುವುದರೊಂದಿಗೆ ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಪ್ರಜ್ಞೆಯನ್ನುಂಟುಮಾಡಿವೆ.

ಸ್ವಾತಂತ್ರ್ಯ ಚಳುವಳಿಯ ವಸ್ತು ವಿಷಯಗಳನ್ನು ಅಂದಿನ ವಾಸ್ತವ ಬದುಕಿಗೆ ಹಾಗೂ ಚಾರಿತ್ರಿಕ ಸಂದರ್ಭಕ್ಕೆ ಪ್ರತಿಕ್ರಿಯಿಸುವುದರೊಂದಿಗೆ ಕೆಲವು ಬರಹಗಾರರೂ ಚಳುವಳಿಯಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸದವರಿದ್ದಾರೆ. ಕೆಲವರು ರಾಷ್ಟ್ರನಾಯಕರ ಭಾವನಾತ್ಮಕ ಭಾಷಣಕ್ಕೆ ತಮ್ಮ ಮನಸ್ಸನ್ನು ತೆರೆದುಕೊಂಡಿದ್ದಾರೆ. ಆ ರಾಷ್ಟ್ರನಾಯಕರ ಐಡಿಯಾಲಾಜಿಯನ್ನಿಟ್ಟುಕೊಂಡು ಮತ್ತು ಕೆಲವರು ವಸಾಹತುಶಾಹಿ ಅನುಭವ ಸ್ವಾತಂತ್ರ್ಯ ಚಳುವಳಿಯ ಬಿಸಿಯನ್ನು ಗ್ರಹಿಸಿ ಆಧುನಿಕ ಸಂವೇದನೇಯ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನಿಡುವುದರೊಂದಿಗೆ ಗಾಂಧೀವಾದದ ಪರಿಭಾಷೆಗಳು ನೇರವಾಗಿ ವ್ಯಕ್ತಪಡಿಸದೆ ಅವುಗಳ ಆಶಯವನ್ನೇಷ್ಟೆ ಕೃತಿಗಳಲ್ಲಿ ತಂದಿದ್ದಾರೆ. ವಿ.ಎಂ ಇನಾಂದರ್ ಅವರು 'ಮೂರಾಬಟ್ಟೆ' ೧೯೪೭ ಆಗಸ್ಟ್‌ನಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನಕ್ಕೆ ಕಾದಂಬರಿಯ ನಾಯಕ ಶಾಮಣ್ಣ ಹೋಗಿ ಅಲ್ಲಿ ಗಾಂಧಿ ನೆಹರು, ಆಜಾದ್ ಮತ್ತು ಪಟೇಲರ ಭಾಷಣಗಳಿಂದ ಮೂಡುವ ರಾಷ್ಟ್ರೀಯ ಕಲ್ಪನೆಗಳು ದೇಶಿಯ ನೆಲೆಯಲ್ಲಿ ವ್ಯಕ್ತಗೊಳ್ಳುತ್ತವೆ. 'ವಿಜಯ ಯಾತ್ರೆ' ೧೯೪೭ ಆಗಸ್ಟ್ ೧೪ರಂದು ಪ್ರಾರಂಭವಾಗಿ ಕೇವಲ ಒಂದೇ ದಿನದಲ್ಲಿ ನಡೆಯುವ ಕ್ರಿಯೆಗಳನ್ನು ಒಳಗೊಂಡಿದೆ.

ವಿಜಯ ಸ್ವಾತಂತ್ರ್ಯ ಬರುವ ದಿನ ಮಾತಾಡುವ ಮಾತುಗಳು "ಇದು ಗ್ರಾಮೋದ್ಯೋಗಗಳ ವಿಚಾರದಲ್ಲಿ ಮೂಲಕ ಶಿಕ್ಷಣದ ವ್ಯವಸ್ಥೆಯ ವಿಚಾರದಲ್ಲಿ. ದೇಶದ ಯಾಂತ್ರೀಕರಣದ ವಿಚಾರದಲ್ಲಿ ಜಾತೀಯತೆಯ ವಿಚಾರದಲ್ಲಿ ಅಹಿಂಸೆಯ ವಿಚಾರದಲ್ಲಿ ತಮ್ಮ ಸರಕಾರ ಗಾಂಧಿಜಿಯಿಂದ ಹೆಜ್ಜೆ ಹೆಜ್ಜೆಗೂ ದೂರ ದೂರ ಹೋಗುತ್ತಲಿದೆ. ಸ್ವಾತಂತ್ರ್ಯ ಬಂದರೂ ಗಾಂಧಿಜಿಯವರಿಗೆ ನಿರಾಶೆ ತಪ್ಪಲಿಲ್ಲ. ಅವರ ನಿಷ್ಠವಂತ ಅನುಯಾಯಿಗಳು ಇನ್ನೂ ಬದುಕಬಾರದು ಎಂದು ಹೇಳುವುದು ಇದಕ್ಕಾಗಿಯೇ."[೫] ಇಲ್ಲಿ ಗಾಂಧೀವಾದದ ಪರಿಭಾಷೆಗಳಾದ ಗ್ರಾಮಸ್ವರಾಜ್ಯ ಕಲ್ಪನೆ. ಸ್ವದೇಶಿಯತೆಯ ಕಲ್ಪನೆ, ಅಸ್ಪೃಶ್ಯತಾ ಕಲ್ಪನೆ ಮತ್ತು ಅಹಿಂಸಾ ಪರಿಕಲ್ಪನೆಗಳು ಸ್ವಾತಂತ್ರ್ಯ ಬರಲಿರುವ ಮರುದಿನವೇ ನಾಯಕ ವಿಜಯನಲ್ಲಿ ನಿರಾಶೆಯ ಮತ್ತು ವಿಷಾದದ ಅನುಭವವನ್ನು ಉಂಟು ಮಾಡಿರುವುದನ್ನ ಕಾಣುತ್ತೇವೆ. ರಾಷ್ಟೀಯತೆಯ ಮನೋಧರ್ಮವು ದುರ್ಬಲವಾಗಿರುವುದು ಕಂಡು ಬರುತ್ತದೆ.

ಅ.ನ.ಕೃ ಅವರ'ಅಮರಆಗಸ್ಟ್'(೧೯೫೦)೧೯೪೭ರಲ್ಲಿ ಸ್ವಾತಂತ್ರ್ಯ ಚಳುವಳಿಯ ಹೋರಾಟವು ಗಾಂಧಿಯ ನಾಯಕತ್ವದಲ್ಲಿ ನಡೆದರು; ಈ ಸ್ವಾತಂತ್ರ್ಯ ಚಳುವಳಿ ದೇಶಿಯತೆಯ ಪರಿಕಲ್ಪನೆಯ ಮೂಲಕ ವಸಾಹತುಶಾಹಿ ಪ್ರಭುತ್ವವನ್ನು ವಿರೋಧಿಸುವ ನೆಲೆಯಲ್ಲಿ ಗಾಂಧಿವಾದವು ಪ್ರಮುಖ ಪಾತ್ರ ವಹಿಸಿದೆ. ತತ್ವದ ದೃಷ್ಟಿಯಿಂದ ಯಾವ ವ್ಯಕ್ತಿಯೂ ಒಂದು ರಾಷ್ಟ್ರದ ಮೇಲೆ ದಬ್ಬಾಳಿಕೆ ನಡೆಸುವುದು ನ್ಯಾಯವಲ್ಲ ಆದರೆ ಅಂಥ ಪರಿಸ್ಥಿತಿಯೊದಗಿ ಬರಬೇಕಾದರೆ ರಾಷ್ಟ್ರದ ಶಕ್ತಿ ದೌರ್ಬಲ್ಯಗಳೂ ಕಾರಣವಾಗುತ್ತವೆ. ಜರ್ಮನಿಯ ಇತಿಹಾಸವನ್ನೇ ನೊಡು ಜಗತ್ತನ್ನೇ ಜಯಿಸಿ ಅದನ್ನು ಜರ್ಮನ್ ಮಾಹಾಸಮ್ರಾಜ್ಯದ ವಸಾಹತುಗಳನ್ನಾಗಿ ಮಾಡಬೆಕೆಂಬ ಆಕಾಂಕ್ಷೆ ಕೇವಲ ಒಬ್ಬ ಹಿಟ್ಲರನದಾಗಿರಲಿಲ್ಲ. "ಕೈಸರ್, ಬಿಸ್ಮಾರ್ಕ್‌ರೂ ಇದೇ ಮನೋಭಾವದವರೇ ಆಗಿದ್ದರೂ ., ಇಲ್ಲೇ ಬಾಪು ಹಿರಿಮೆಯನ್ನು ನೀನು ಕಾಣಬೇಕಾದದ್ದು ಬಾಪು ಸ್ಪಷ್ಟವಾಗಿ ಹೆಳಿದ್ದಾರೆ. ಇಂಡಿಯಾ ಜಗತ್ತಿಗೆ ಅನುಕೂಲವಾಗುವುದಕ್ಕಾಗಿ ಭಾರತ ತಲೆಯೆತ್ತಬೇಕು. ಇತರ ರಾಷ್ಟ್ರಗಳ ಭಗ್ನಾವಶೇಷಗಳ ಮೇಲೆ ಭಾರತ ತಲೆಯೆತ್ತಬೇಕಾಗಿಲ್ಲ"[೬] ಈ ಸಂಭಾಷಣೇಯಲ್ಲಿ ಸ್ವಾತಂತ್ರ್ಯ ಹೋರಾಟದ ಸಂಧರ್ಭವು ನೇರವಾಗಿ ವಸಾಹತುಶಾಹಿ ಪ್ರಭುತ್ವವನು ವಿರೋಧಸುವ ದೇಶಿಯ ಪರಿಕಲ್ಪನೆಯ ನೆಲೆಯಲ್ಲೇ ಬರಹಗಾರರೂ ಗಾಂಧೀವಾದವನ್ನು ಉತ್ಪ್ರೇಕ್ಷಿತ ನೆಲಯಲ್ಲೇ ನೋಡುತಾರೆ. ಬಸವರಾಜ ಕಟ್ಟೀಮನಿ 'ಸ್ವಾತಂತ್ರ್ಯದೆಡೆಗೆ' ಕೃತಿ ಸ್ವಾತಂತ್ರ್ಯ ಸಂಗ್ರಾಮವನ್ನು ಹನ್ನೆರಡು ವರ್ಷದ ಬಾಲಕನ ಮೂಲಕ ನೊಡುತ್ತಾನೆ. ಈ ಹುಡುಗ ಝುಂಡಾ ಊಂಚಾ ರಹೇ ಹಮಾರಾ ಎಂಬ ಪದಗಳನ್ನು ಅರ್ಥ ಮಾಡಿಕೊಳ್ಳಲಾರದವ. ಹುಡುಗ ಧ್ವಜದ ಗೀತೆಗೆ ಒಲಿಯುವ ಸಂದರ್ಭವು ಮಾತ್ರ ಗಾಂಧೀಯ ವ್ಯಕ್ತಿತ್ವ ಇಡೀ ಭಾರತದೇಶದ ಪ್ರತಿಮೆಯಾಗಿ ಕಾಣುತ್ತಿದ್ದರು ಅನ್ನುವುದನ್ನು ವ್ಯಕ್ತಪಡಿಸುತ್ತಾರೆ. ಗಾಂಧಿವಾದದ ಆದರ್ಶ ಕಲ್ಪನೆಗಳು ಪ್ರಖರವಾಗಿದ್ದರು. ವಸಾಹತುಶಾಹಿ ಆಡಳಿತವು ದೇಶಿಯ ಬಡತನಕ್ಕೆ ಕಾರಣವಾಗಿರುವುದನ್ನು ಸೂಚ್ಯವಾಗಿ ತಿಳಿಸುತ್ತಾರೆ. ನಮ್ಮ ಅನ್ನ ಬಟ್ಟೆ ಎಲ್ಲವನ್ನು ಈ ಪರದೇಶಿ ಸರಕಾರ ಸೆಳೆದೊಯ್ಯುತ್ತದೆ. ಅನ್ನುವ ಭಾಷಣದ ಮಾತಿಗೆ ಆ ಹುಡುಗನ ಪ್ರತಿಕ್ರಿಯೆ 'ಎಷ್ಟು ನಿಜ! ಎಷ್ಟು ನಿಜ! ಈ ಸರಕಾರದ ಕಾರಬಾರದಿಂದಲೆ ನಮಗೀ ಭೀಕರ ದಾರಿದ್ರ್ಯ ಬಂದಿರುವುದು....., ನನ್ನ ಅಣ್ಣನ ಹರಕು ಅಂಗಿ....., " ಪ್ರಭುತ್ವವು ಕೇಂದ್ರೀಕೃತಗೊಂಡು ಗಾಂಧೀವಾದವು ಮೇಲಸ್ತರದಲ್ಲೇ ನಿಂತುಬಿಡುವುದನ್ನು ಲೇಖಕರು ಗಮನಿಸುತ್ತಾರೆ. ಕಾರಂತರು 'ಮರಳಿ ಮಣ್ಣಿಗೆ', 'ಔದಾರ್ಯದ ಉರುಳಲ್ಲಿ' ಕಾದಂಬರಿಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಆಶಯವನ್ನು ಶೌರ್ಯ ತ್ಯಾಗ ಉತ್ಸಾಹದಿಂದ ಮ್ಯನವಿರೇಳಿಸುವಂತೆ ನಿರೂಪಿಸಲು ತೊಡಗಿ ಗಾಂಧೀವಾದದ ಪರಿಭಾಷೆಗಳು ಹುಸಿರಾಷ್ಟ್ರೀಯತೆಯನ್ನು ಅಭಿವ್ಯಕ್ತಿಸುತ್ತವೆ.

'ಅಹಿಂಸೆ' ಭಾರತದೇಶದ ಒಂದು ಆರ್ಷೇಯ ಮೌಲ್ಯವೆಂಬಂತೆ ಪರಿಭಾವಿಸಲಾಗಿದೆ. ಬುದ್ಧನಿಂದ ಗಾಂಧಿವರೆಗೆ. ಆದರೆ ಇದನ್ನು ಧಾರ್ಮಿಕ, ಆಧ್ಯಾತ್ಮಿಕ ತಾತ್ವಿಕ. ಮನೋವೈಜ್ಞಾನಿಕ, ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಇದನ್ನು ಗ್ರಹಿಸುವ ಮತ್ತು ನಿರಾಕರಿಸುವ ನೆಲೆಗಳು ಮಾತ್ರ ವಿರೋಧಾಭಾಸದಿಂದ ಕೂಡಿರುವುದು ಮಾತ್ರ ಕುತೂಹಲಕರವಾಗಿದೆ. ಮೌಲ್ಯಗಳ ಚೌಕಟ್ಟಿನಲ್ಲಿ ಅಹಿಂಸೆಯನ್ನು ಅರ್ಥೈಸಿಕೊಳ್ಳುವ ಪ್ರಯತ್ನ ಪಟ್ಟರೆ ಹಿಂಸೆ ಅಹಿಂಸೆಯ ಪರಿಭಾಷೆಗಳು ಒಬ್ಬರಿಗೊಂದೊಂದು ಬಗೆಯಾಗಿರುತ್ತದೆ. ಆದ್ದರಿಂದ ಭಾರತೀಯ ಸಾಹಿತ್ಯದಲ್ಲಿ ಹಿಂಸೆ ಅಹಿಂಸೆಯ ನಡುವಿನ ಅಂತರವೇ ಅಸ್ಪಷ್ಟವಾಗಿ ಹೋಗುತ್ತದೆ. ಆದರೆ ಬುದ್ಧನಿಂದ ಹಿಡಿದು ಗಾಂಧಿ ಹಾಗೂ ಅಂಬೇಡ್ಕರ್‌ವರೆಗೆ 'ಹಿಂಸೆ' ಅಹಿಂಸೆಯ ಬಗೆಗಿರುವ ಪರಿಕಲ್ಪನೆಗಳು ವಿಚಿತ್ರ ಹಾಗೂ ವಿರೋಧಾಭಾಸದಿಂದ ಕೂಡಿದ ನಂಬಕೆಗಳಾಗಿ ಕಾಣುತ್ತವೆ. ಭಾರತೀಯ ಸಾಹಿತ್ಯದಲ್ಲಿ ಹಿಂಸೆ ಅಹಿಂಸೆ ಪರಿಕಲ್ಪನೆಗಳೂ ವಿಕಾಸದ ಪ್ರಜ್ಞೆಯಾಗಿ ಅಬಿವ್ಯಕ್ತಗೊಂಡಿದೆ; ಆದರೆ ಕನ್ನಡ ಸಾಹಿತ್ಯದಲ್ಲಿ ಮುನುಷ್ಯನ ವ್ಯಕ್ತಿತ್ವ ರೂಪುಗೊಳ್ಳುವುದು ಪ್ರಕೃತಿದತ್ತವಾದರೂ ಪ್ರಕೃತಿಯಲ್ಲಿ ಹಿಂಸೆ ಅಹಿಂಸೆಗಳೆರಡು ಒಂದಕ್ಕೊಂದು ಸಮಾನಾಂತರವಾದ ಚೌಕಟ್ಟಿನಲ್ಲೇಯೇ

ವ್ಯಕ್ತಗೊಂಡಿದೆ. ಕನ್ನಡ ಸಾಹಿತ್ಯದ ಚಳುವಳಿಗಳಾದ ನವೋದಯ, ಪ್ರಗತಿಶೀಲ. ನವ್ಯ ಮತ್ತು ದಲಿತ ಬಂಡಾಯದ ಬರಹಗಾರರು ವಿಭಿನ್ನವಾದ ತಾತ್ವಿಕ ಗ್ರಹಿಕೆಗಳ ಮೂಲಕ ಪ್ರತಿಕ್ರಿಯಿಸುತ್ತಾರೆ. ನವೋದಯ ಬರಹಗಾರರು ಪ್ರಕೃತಿ ಮತ್ತು ಮನುಷ್ಯನ ಸಂಬಂಧದ ನಡುವೆ ಉಂಟಾಗುವ ಹಿಂಸೆ-ಅಹಿಂಸೆಯನ್ನ ಒಪ್ಪಿಕೊಂಡು ಅಹಿಂಸೆಯ ಕಡೆ ತುಡಿಯುವ ವರ್ಗ ಸಂಘರ್ಷದ ನೆಲೆಯಲ್ಲಿ ನಿಂತು ಬಿಡುತ್ತಾರೆ. ಸ್ವಾತಂತ್ರೋತ್ತರ ನವ್ಯ ಬರಹಗಾರರು ಹಿಂಸೆಯನ್ನು ವೈಯಕ್ತಿಕ ನೆಲೆಯಲ್ಲೇ ಹಿಂಸೆಯನ್ನು ಅನುಭವಿಸುವ ಮನೋಧರ್ಮದಲ್ಲಿ ಕಾಣುತ್ತೇವೆ. ಆದರೆ ದಲಿತ ಬಂಡಾಯ ಬರಹಗಾರರೂ ಚಳುವಳಿಯ ಸಂದರ್ಭದಲ್ಲಿ ಹುಟುವ ಹಿಂಸೆ ವ್ಯವಸ್ಥೆಯನ್ನೇ ಮೀರುವ ನೆಲೆಯದ್ದು. ವರ್ಗ ಜಾತಿ ಅಸ್ಪೃಶ್ಯತೆ ಲಿಂಗದಾರಣೆ ಪ್ರಭುತ್ವ ಧಾರ್ಮಿಕತೆ ಮತ್ತು ಕುಟುಂಬದ ಮೂಲಕ ಹುಟ್ಟುವ ಹಿಂಸೆಯನ್ನು ಮೀರುವ ನೆಲೆ. ಈ ಚಳುವಳಿಯ ಬರಹಗಾರರ ಆಶಯವು ಹಿಂಸೆಯನ್ನು ಮೀರಿ ಮಾನವೀಯ ಮೌಲ್ಯಗಳೊಂದಿಗೆ ಅಹಿಂಸಾತ್ಮಕ ಸಮಾಜವನ್ನು ನಿರ್ಮಿಸುವ ಕಡೆ ಮುಖ ಮಾಡುತ್ತಾರೆ.

ಗಾಂಧಿವಾದದ ಪ್ರಮುಖ ಪರಿಭಾಷೆಯಾದ ‘ಅಹಿಂಸೆ’ ಕನ್ನಡ ಸಾಹಿತ್ಯದಲ್ಲಿ ಬರಹಗಾರರು “ಪರಂಪರೆ ಆಧುನಿಕತೆ ವಿಜ್ಞಾನ ಧರ್ಮ, ಸಂಸ್ಕೃತಿ ನಾಗರೀಕತೆಗಳ ಅಪೂರ್ವ ಸಾಮರಸ್ಯವನ್ನು ಮತ್ತು ಸಾಂಸ್ಕೃತಿಕವಾಗಿ ಉನ್ನತ ಸಂಸ್ಕೃತಿಯ ನಿರ್ಮಾಣ ಮಾಡುವುದಕ್ಕೆ ಅಹಿಂಸೆಯ ಪರಿಕಲ್ಪನೆಯ ಆಶಯವು ಕಾರಣವಾಗಿದೆ. ನವೋದಯ ಚಳುವಳಿಯ ಪ್ರಧಾನ ಕಾಳಜಿ ಹಿಂಸೆ ಅಲ್ಲ ಪ್ರೇಮ”[೮] ಅಂದರೆ ಅಹಿಂಸಾತ್ಮಕ ಪರಿಕಲ್ಪನೆ ಎಂದು ಗುರುತಿಸಬಹುದು. ಇದನ್ನು ದೇಶಿಯತೆಯ ಪರಿಕಲ್ಪನೆಯ ಮೂಲಕ ಸಮಾಕಾಲೀನ ಸಾಮಾಜಿಕ ವೈರುಧ್ಯಗಳನ್ನು ದಾಟಲು ಮಾನವ ವಿಕಾಸದ ವಿಶ್ವಸ್ಥ ಕಲ್ಪನೆಯನ್ನು ಹಾಗೂ ಪ್ರೇಮದ ಆಶಯಗಳು ಅಹಿಂಸೆಯಾಗಿಯೇ ಮುಖ್ಯವಾಗುತ್ತವೆ ಎನ್ನುತ್ತಾರೆ. “ವಸಾಹತುಶಾಹಿಯ ಪ್ರತ್ಯಕ್ಷ ಅಪ್ರತ್ಯಕ್ಷ ಚಾರಿತ್ರಿಕ ಹಿಂಸೆಗಳನ್ನು ದಾಟಲು ಸಾಧ್ಯವೆಂದು ಭಾವಿಸುತ್ತಾರೆ. ಇವರು ಹಿಂಸೆ ಮೂಲತಃ ಸಾಹಿತ್ಯದಿಂದಲೇ ಹೊಮ್ಮಿ ಬರುವ ಪರಿಕಲ್ಪನೆಯಲ್ಲ ಇದು ಒಂದು ಸಾಂಸ್ಕೃತಿಕ ಅರಿವಿನ ಪದವಾಗಿ ಸಂಕೀರ್ಣ ಅರ್ಥಗಳನ್ನು ಹೊಂದಿದ”[೯] ಎಂದು ಗ್ರಹಿಸುತ್ತಾರೆ. ರೆಮಂಡ್ ವಿಲಿಯಂ ‘ಹಿಂಸೆ’ಯ ಪದದ ಮೂಲಾರ್ಥ ದೈಹಿಕ ಹಲ್ಲೆಯನ್ನು ಸೂಚಿಸುವುದಾದರೂ ಅದನು ನಿರ್ವಹಿಸಲು ಅಷ್ಟು ಸುಲಭವಲ್ಲದ ಅನೇಕ ಭಾವನೆಗಳ ಅರ್ಥ ಛಾಯೆಗಳನ್ನು ಹೊಂದಿದೆ. ಸ್ವಚ್ಛಂದಂತೆ ಪುಂಡಾಟ ಸಮಾಜದ ನಿಯಮಗಳ ಮೀರುವಿಕೆಯನ್ನು ಕೂಡ ಈ ವ್ಯಾಪ್ತಿಯಲ್ಲಿ ತರುತ್ತವೆ. ಸಹಜೀವಿಗಳ ಸ್ವಾತಂತ್ರ್ಯ ಸುಖ ಮಾನಸಿಕ ಶಾಂತಿಗಳನ್ನು ಕದಡುವ ಮೃಗೀಯತೆಯನ್ನು ಮಾನಸಿಕ ಬಲಪ್ರಯೋಗವನ್ನೂ ಹಿಂಸೆಯೆಂದು ಪರಿಗಣಿಸಲಾಗುತ್ತದೆ. ಮಾನವತೆ ಮಾನವೀಯತೆ ವ್ಯಕ್ತಿ ಸ್ವಾತಂತ್ರ್ಯಗಳನ್ನು ಹರಣಗೊಳಿಸುವ ಎಲ್ಲವನ್ನು ಸ್ವಾತಂತ್ರ್ಯಪೂರ್ವ ಕಾಲಘಟ್ಟದ ಬರಹಗಾರರು ಹಿಂಸೆಯ ಪರಿಕಲ್ಪನೀಕರಣದಲ್ಲಿ ಪರಿಗಣಿಸಿದ್ದಾರೆ. ಇದು ಗಾಂಧಿವಾದದ ಅಹಿಂಸೆಯ ಪರಿಕಲ್ಪನೆಯ ನೆಲೆಯಲ್ಲೇ ವ್ಯಕ್ತಗೊಂಡಂತವುಗಳೆಂದು ಭಾವಿಸಬಹುದು. ಕಾರಂತರ ‘ಚೋಮನ ದುಡಿ’ಯಲ್ಲಿ ಚೋಮ ತಾನು ತನ್ನದೇ ಆದ ತುಂಡು ನೆಲವನ್ನು ಉತ್ತು ಬಿಡಬೇಕೆಂಬ ಆಸೆ, ಆಧುನಿಕ ಸ್ವಾತಂತ್ರ್ಯದ ಅಪೇಕ್ಷೆಯಾದರೂ ಒಡೆಯ ಆಳಿನ ಸಂಬಂಧದೊಡನೆ ಹುಟ್ಟುವ ಹಿಂಸೆ ಮಾತ್ರ ಹಿಂಸಾತ್ಮಕವಾದುದು. ಈ ಹಿಂಸೆಯನ್ನು ಚೋಮ ಮರೆಯುವುದು ದುಡಿಯಲ್ಲಿ, ಸಾಂಪ್ರದಾಯಿಕತೆ ಮತ್ತು ಅಧುನಿಕತೆ ಎರಡು ವ್ಯವಸ್ಥೆಗಳ ನಡುವಿನ ಹಿಂಸೆಯನ್ನು ದುಡಿಯ ಮೂಲಕ ವ್ಯಕ್ತಪಡಿಸುತ್ತಾನೆ. ಆದರೆ ತನ್ನ ಯಜಮಾನ ತೋರುವ ಸಹಾನುಭೂತಿ ಔದಾರ್ಯ ಮಾತ್ರ ಸರ್ವಕಾಲಿಕ ಮೌಲ್ಯವೆಂದು ತೋರಿಸಿ ವಿಕಾಸಕ್ಕೆ ವಿರೋಧವಾದ ಹಿಂಸೆಯನ್ನು ಅನುಭವಿಸುತ್ತಾನೆ. ಅದೇ ರೀತಿ ‘ಕುಡಿಯರ ಕೂಸು’ವಿನಲ್ಲಿ ಕಾಡಿನ ಬದುಕಿನೊಂದಿಗೆ ಒಂದಾಗಿರುವ ಮಲೆ ಕುಡಿಯರು ಆಧುನಿಕತೆಯ ಹಿನ್ನೆಲೆಯಲ್ಲಿ ಹುಟ್ಟುವ ಹಿಂಸೆಗೆ ವಿಗತರಾಗಿ ಪರಕೀಯರಾಗಿ ವ್ಯವಸಾಯ ವಿಸ್ತರಣೆಗೆ ಸಿಲುಕಿ ಅವರು ತಮ್ಮ ನೆಲೆದಲ್ಲಿಯೇ ಆಳುಗಳಾಗಿದ್ದಾರೆ, ಕೊನೆ ಕೊನೆಗೆ ಅವರ ಕೂಡು ಕಟ್ಟಿನ ಸಮಾಜವನ್ನು ಅದು ಮಾಡುವ ಹಿಂಸೆ ಮಾತ್ರ ಕುಡಿಯರ ಬದುಕಿನ ವಾಸ್ತವ ನೆಲೆಗೆ ಪೆಟ್ಟು ಬೀಳುತ್ತದೆ. ‘ಮರಳಿ ಮಣ್ಣಿಗೆ’ಯಲ್ಲಿ ಆಧುನಿಕತೆಯ ಪ್ರಕೃತಿ ಮತ್ತು ಮನುಷ್ಯನ ಸಂಬಂಧವನ್ನು ನಾಶಮಾಡುತ್ತಿರುವುದನ್ನು ಹಿಂಸೆಯೆಂದೆ ಪರಿಗಣಿಸಿದ್ದಾರೆ. ಕಾರಂತರು ಈ ಸಂಬಂಧವನ್ನು ಕಡಿಯುವಿಕೆಯೇ ಹಿಂಸೆಯ ಮೂಲವಾಗಿದೆ, ತನ್ನ ಮಣ್ಣಿನಿಂದ ಸಮಾಜದಿಂದ ದೂರವಾಗಿರುವುದೇ ಲಚ್ಚನ ವ್ಯಥ್ಯಗೆ ಕಾರಣವಾಗುತ್ತದೆ. ಕಾರಂತರು ಆಧುನಿಕತೆಯನು ಬೆಳೆಸಿದ ವಸಾಹತುಶಾಹಿ ಪ್ರವೃತ್ತಿಯ ಮುನುಷ್ಯನ ಅಹಿಂಸಾತ್ಮಕವಾದ ಸಂಸ್ಕೃತಿಯ ಮೇಲೆ ಮಾಡುವ ದಬ್ಬಾಳಿಕೆಯನ್ನು ದೇಶಿಯತೆ ಮತ್ತು ವಸಾಹತುಶಾಹಿ ಪರಿಕಲ್ಪನೆಗಳನ್ನು ಮುಖಾಮುಖಿಯಾಗಿಸುತ್ತಾರೆ. ಕಾರಂತರಿಗೆ ರಾಷ್ಟ್ರಕಲ್ಪನೆಯ ಪ್ರಯತ್ನದಲ್ಲಿ ಅನಿವಾರ್ಯವಾಗಿ ಕಾಣುವ ಸಾಮಾಜಿಕ ವರ್ಗ ಭೇದಗಳನ್ನು ಮುಚ್ಚಲು ಪ್ರಯತ್ನಿಸಿದಂತೆ ಕಾಣುತ್ತದೆ. ಶ್ರೀ ಸಾಮಾನ್ಯನ ಅವಿಷ್ಕಾರವೂ ಈ ರಾಷ್ಟ್ರೀಯವಾದಿ ಕಾರ್ಯ ಯೋಜನೆಗಳಲಿ ಆತನ ಮೇಲೆ ನಡಿಯುವ ಸಮಾಜಿಕ ಹಿಂಸೆಯನ್ನು ಗ್ರಹಿಸುವ ಪ್ರಯತ್ನ ಮಾಡಿದ್ದಾರೆ ಅನ್ನಿಸುತ್ತದೆ. ಗಾಂಧೀವಾದಿಯಾದ ಕಾರಂತರು ಹಿಂಸೆಯನ್ನು ಅಹಿಂಸಾತ್ಮಕ ಪರಕಲ್ಪನೆಯನ್ನು ಅರ್ಥೈಸಿಕೊಳ್ಳಲು ಪ್ರಯತ್ನ ಪಟ್ಟಿರುವುದು ದೇಶಿಯತೆ ಮತ್ತು ವಸಾಹತುಶಾಹಿ ಎನ್ನುವ ಎರಡು ಕಲ್ಪನೆಗಳ ಮೂಲಕ, ಹಿಂಸೆ ಸಮಾಜದಲ್ಲಿ ನಿರಂತರವಾಗಿ ಎಂದಿಗೂ ಇರುವ ಸತ್ಯ. ಈ ಹಿಂಸೆಯನ್ನು ಮೀರಲು ಅಹಿಂಸೆಯನ್ನು ಬಾಹುಕವಾಗಿ ಉನ್ನತಿಕರಿಸಿದ್ದಾರೆ. ಆದರೆ ಕಾರಂತರ ಕಾದಂಬರಿಗಳಲ್ಲಿ ಹಿಂಸೆಯ ನೆಲೆಯಿಂದ ಅಹಿಂಸಾ ಪರಿಕಲ್ಪನೆಯ ಕಡೆಗೆ ಮುಖ ಮಾಡುತ್ತಾರೆ. ಹಿಂಸಾನೆಲೆಯನ್ನು ಮೀರಿ ಮುಂದುವರಿಯುವುದು ಅಹಿಂಸೆ ನೆಲೆಗೊಸ್ಕರ ಇದನ್ನು ಗಾಂಧಿವಾದದ ‘ಅಹಿಂಸೆ’ ಕಲ್ಪನೆ ಅಥವಾ ಪರಿಭಾಷೆಯ ಪ್ರೇರಣೆ ಎಂದು ಗ್ರಹಿಸಬಹುದು.

ಕುವೆಂಪು ಕಾದಂಬರಿಗಳಲ್ಲಿ ವೈಯುಕ್ತಿಕ ನೆಲೆಯಲ್ಲಿ ಹುಟ್ಟುವ ಹಿಂಸೆ ಸಾಮೂಹಿಕ ಹಿಂಸೆಯಾಗುತ್ತದೆ. ಕುವೆಂಪು ಸರ್ವೋದಯ ಕಲ್ಪನೆಯ ಮೂಲಕ ಯೋಚಿಸುವ ಅಲೋಚನಾಕ್ರಮ ಮಾತ್ರ ಅಹಿಂಸಾತ್ಮಕವಾದುದು. ‘ಮಲೆಗಳಲ್ಲಿ ಮದುಗಳು’ ಕಾದಂಬರಿಯನ್ನು ‘ಹೋನ್ನಾಳಿ ಹೊಡ್ತ’ ಹೊನ್ನಾಳಿಯ ವಸೂಲಿ ಸಾಬರದು ಗೌಡರ ಹಿಂಸೆಯನ್ನು ನೇರವಾಗಿ ನಡೆಸುವ ಮರ್ಧವರ್ತಿತನವಾದರೂ ಹೊನ್ನಾಳಿ ಹೊಡ್ತದ ಸನ್ನಿವೇಶ ಎರಡು ಅಂಶಗಳನ್ನು ವ್ಯಕ್ತಪಡಿಸುತ್ತದೆ. ಒಳಗೆ ಒಬ್ಬ ತಾಯಿ ಮಗುವಿಗೆ ಮೊಲೆಯುಡಿಸುವ ಸಂಭ್ರಮದಲ್ಲಿ ಮಗು-ತಾಯಿ ಜಗತ್ತನ್ನೇ ಮರೆತಿರುತ್ತಾರೆ. ಹೊರಗೆ ಗೌಡರು ಸಣ್ಣಬೀರನನ್ನು ಹೊಡೆಸುತ್ತಿರುತ್ತಾರೆ ತಾಯಿ-ಮಗುವಿನ ಸಂಬಂಧ ಅಹಿಂಸಾ ಕಲ್ಪನೆಯಾದರೆ ಹೊರಗೆ ಗೌಡ ಹೊಡೆಸುವ ಹೊಡ್ತ ಹಿಂಸಾತ್ಮಕವಾದುದು. ಹಿಂಸೆ ಜಮೀನ್ದಾರಿ ವ್ಯವಸ್ಥೆಯು ಹುಟ್ಟು ಹಾಕಿದ ಅಹಂಕಾರದ ಪ್ರತೀಕವಾದರೆ, ಸ್ತ್ರೀ-ತಾಯಿಯ ಮಮತೆ ಅಹಿಂಸೆಯ ಪ್ರತೀಕ ತಾಯಿಯ ಮಮತೆ ಒಳತಿನ ಸಂಕೇತವಾಗಿದೆ. ಅಹಿಂಸೆ-ಹಿಂಸೆಗಳನ್ನು ಒಂದೇ ಚರಿತ್ರೆಯ, ಒಂದೇ ಮಾನವ ಇತಿಹಾಸದ ಎರಡು ನಿರಂತವಾದ ಪ್ರಕ್ರಿಯೆಗಳೆಂದು ಭಾವಿಸುವಂತೆ ಇದೆ. ಆದರೆ ಪ್ರಗತಿಶೀಲ ಚಳುವಳಿ ಬರಹಗಾರರು ಮಾತ್ರ ‘ಅನಾಗತ ಹಿಂಸೆ’ಯನ್ನು ಅಸ್ಖಲಿತವಾಗಿ

ಅಭಿವ್ಯಕ್ತಿಸಿದ್ದಾರೆ. ನಿರಂಜನ ಅವರ 'ಚಿರಸ್ಮರಣೆ' ಗಾಂಧೀವಾದ ಮತ್ತು ಮಾರ್ಕ್ಸ್‌ವಾದಗಳ ನಡುವಿನ ತಾತ್ವಿಕ ಭಿನ್ನತೆಯೊಂದಿಗೆ ಗಾಂಧೀವಾದವು ದೇಶಿಯ ನೆಲೆಯಲ್ಲಿ ಸಾಂಸ್ಕೃತಿಕ ರಾಜಕೀಯ ಮತ್ತು ಆರ್ಥಿಕ ಚೌಕಟ್ಟನ್ನು ನಿರ್ಮಿಸಿಕೊಂಡು ಸಾಮ್ರಾಜ್ಯಕ್ಕೆ ಪ್ರತಿಕ್ರಿಯಿಸುತ್ತದೆ. ಇದು ೧೯೪೧ರಲ್ಲಿ ಕೈಯ್ಯೂರಿನಲ್ಲಿ ನಡೆದ ರೈತರ ಹೋರಾಟದ ಘಟನೆಗಳು ದುಡಿಯವ ವರ್ಗವು ಸರಕಾರಿ ಪ್ರಭುತ್ವ ಮತ್ತು ಜಮೀನ್ದಾರಿ ವ್ಯವಸ್ಥೆಯ ವಿರುದ್ಧ ಹೋರಾಟ ಮಾಡುತ್ತದೆ. ದುಡಿಯುವ ವರ್ಗದ ನಾಲ್ವರ ಮರಣದಂಡನೆ ಹಿಂಸಾತ್ಮಕವಾಗಿರುತ್ತದೆ. ಆದರೆ ಈ ನಾಲ್ವರು ಸಮಾಜದ ವರ್ಗ ಸಂಘರ್ಷವನ್ನ ಮೀರುವ ಅಹಿಂಸಾತ್ಮಕ ನೆಲೆಗೆ ಹಂಬಲಿಸುವ ಮಾನವತಾವಾದಿ ಮೌಲ್ಯಗಳನ್ನು ಹೊಂದಿದ್ದರು. ಹಿಂಸಾತ್ಮಕವಾಗಿ ಪ್ರತಿಕ್ರಿಯಿಸುತ್ತಲೇ ಕೊನೆಯಾಗುತ್ತಾರೆ. ಕೈಯ್ಯೂರಿನ ರೈತರ ಹೋರಾಟವು ಮತ್ತು ರೈತಸಂಘಟನೆ ಎಡಪಂಥಿಯ ರಾಜಕೀಯ ವಿಚಾರದಾರೆಯಾದರು ಇದರ ಜೊತೆಗೆ ಗಾಂಧೀಜಿಯವರ ಅಹಿಂಸಾತ್ಮಕ ಹೋರಾಟದ ಮನೋಭಾವವೂ ಕೂಡಿಕೊಂಡಿರುತ್ತದೆ. ಮಾಸ್ತರ ತಾಳ್ಮೆ ವಿವೇಕಗಳು ಗಾಂಧೀಯವರ ತಾತ್ವಿಕತೆಗಳೊಂದಿಗೆ ಸಮಾಜದ ಸರ್ವೋದಯದ ಕನಸು ಕಾಣುವ ಮನೋಭಾವವನ್ನು ಗುರುತಿಸಬಹುದು. ಈ ಕೈಯ್ಯೂರಿನ ರೈತರ ಹೋರಾಟವು ಸ್ವಾತಂತ್ರ್ಯ ಸಂಗ್ರಾಮದ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪ್ರಜ್ಞೆ ಮೂಡಿಸಿದೆ. 'ವಿಮೋಚನೆ' ಮತ್ತು 'ಮೃತ್ಯುಂಜಯ'ದಲ್ಲಿ ಪ್ರಗತಿಪರ ನಿಲುವು ಅವಿಚ್ಛಿನ್ನವಾಗಿ ಅಭಿವ್ಯಕ್ತಿಗೊಂಡಿದ್ದರು ಆಂತರಿಕ ರಚನೆಯಲ್ಲಿ ಹಿಂಸೆಯನ್ನು ಹೊಂದಿದೆ. ಈ ಕೃತಿಗಳಲ್ಲಿ ವರ್ಗ ಸಮಾಜದ ಸಂಘರ್ಷವನ್ನು ಮೀರುವ ಮತ್ತು ವಿರೋಧಿಸುವ ತಾತ್ವಿಕ ನೆಲೆ ವ್ಯಕ್ತಗೊಂಡಿದೆ. 'ವಿಮೋಚನೆ'ಯ ಚಂದ್ರಶೇಖರ 'ಚಿರಸ್ಮರಣೆ'ಯ ಚಿರಕುಂಡ ಅಪ್ಪು, ಅಬೂಬಕರ ಇರುವ ವ್ಯವಸ್ಥೆಯ ಹಿಂಸಾತ್ಮಕ ಪ್ರಭುತ್ವವನ್ನು ವಿರೋಧಿಸುವಂತವರಾದರು ಹಿಂಸೆ ಹೆಚ್ಚು ಮಹತ್ವ ಪಡೆಯುತ್ತದೆ. ಕಾರಣವೇನೆಂದರೆ ಎಡಪಂಥಿಯ ತಾತ್ವಿಕಗ್ರಹಿಕೆ ಇದಕ್ಕೆ ಕಾರಣವಿರಬಹುದು; 'ಜ್ವಾಲಾಮುಖಿಯ ಮೇಲೆ' ಕೃತಿಯ ಚಂದ್ರಣ್ಣ ವರ್ಗ ಸಂಘರ್ಷದ ಹಿನ್ನೆಲೆಯಲ್ಲಿ ಹುಟ್ಟುವ ಹಿಂಸೆ ಕಾರ್ಮಿಕರನ್ನು ಶೋಷಣೆ ಮಾಡುವ ಬಂಡವಾಳಶಾಹಿ ವರ್ಗವನ್ನು ಪ್ರತಿನಿಧಿಸುತ್ತದೆ. ವ್ಯಾಸರಾಯ ಬಲ್ಲಾಳರ 'ಬಂಡಾಯ' ಕೃತಿಯ ರಾಜೀವ ಕಾರ್ಮಿಕ ಸಮಸ್ಯೆಗಳೊಂದಿಗೆ ಇದೇ ನೆಲೆಯಲ್ಲಿ ಹೋರಾಟ ಮುಂದುವರಿದು ಕೊನೆಗೆ ಹಿಂಸೆಯ ನೆಲೆಯಿಂದ ಪಲಾಯನವಾಗುತ್ತಾನೆ. ರಾಜಕೀಯ ಆರ್ಥಿಕ ಮತ್ತು ಸಾಂಸ್ಕೃತಿಕ ಸಮಾನತೆಗಾಗಿ ಮಾರ್ಕ್ಸ್‌ವಾದದ ತಾತ್ವಿಕ ಗ್ರಹಿಕೆಯಿಂದ ಸಂಘಟಿತರಾದರೂ ಸಮಾನತೆ ಮತ್ತು ಸರ್ವೋದಯದ ಕಲ್ಪನೆ ಕನಸಾಗುತ್ತದೆ. ಇಲ್ಲಿ ಗಾಂಧೀವಾದದ ಪರಿಭಾಷೆಗಳ ಚಿಂತನಕ್ರಮಗಳು ನಿರರ್ಥಕವಾಗಿ ಕಾಣಿಸುತ್ತದೆ. ಪ್ರಗತಿಶೀಲ ಚಳುವಳಿ ಹಿಂಸಕರಾದವರು ಹಿಂಸೆಗೆ ಬಲಿಯಾಗುತ್ತಾರೆ ಎನ್ನುವ ಆಶಯವು ಇದೆ. ತ.ರಾ.ಸು ಅವರ 'ರಕ್ತ ತರ್ಪಣ' ಗಾಂಧಿವಾದ ಪರಿಭಷೆಯಾದ ಅಹಿಂಸೆ ಕಲ್ಪನೆಗೆ ಪ್ರತಿರೋಧನ ಕ್ರಮದ ಕೃತಿಯಾದರೂ; ೧೯೪೨ರ ಆಗಸ್ಟ್ ಕ್ರಾಂತಿಯಲ್ಲಿ ನೇರವಾಗಿ ಭಾಗವಹಿಸಿದ ಲೇಖಕ ಚಳುವಳಿಗಾರ ಅವರ ಭಾವನೆಯಲ್ಲಿ ಬಲಿದಾನವಾಗುತ್ತದೆ. ಬಸವರಾಜ ಕಟ್ಟೀಮನಿ ಅವರ 'ಮಾಡಿ ಮಡಿದವರು' ಕೃತಿ ಹಿಂಸೆ–ಅಹಿಂಸೆಯ ಪರಿಕಲ್ಪನೆಯ ನೆಲೆಯಲ್ಲೇ ಸ್ವಾತಂತ್ರ್ಯ ಚಳುವಳಿಯ ಗಾಂಧಿ ಸಂದೇಶವಾದ do or die ನ ನಿರ್ಣಾಯಕತೆಯನ್ನು ಎರಡು ನೆಲೆಗಳ ಮೂಲಕ ಅಭಿವ್ಯಕ್ತಿಸಿದ್ದಾರೆ. ವಿಶ್ವನಾಥ ಹೇಮಾ ಚಲೇಜಾವ್ ಚಳುವಳಿಯನ್ನು ಹಿಂಸೆ ಅಹಿಂಸೆಯನು ಎರಡು ದ್ವಂದ್ವರಲ್ಲೇ ದೇಶಿಯತೆಯ ಮನೋಧರ್ಮದ ಮೂಲಕ ರಾಷ್ಟಕ್ಕಾಗಿ ಹೋರಾಡುತ್ತರೆ. ತಮ್ಮ ವ್ಯಕ್ತಿಗತ ಆಸೆ ಅಕಾಂಕ್ಷೆಗಳನ್ನು ಮರೆತು ದೇಶಕ್ಕಾಗಿ ಮಾಡಿ ಮುಡಿಯುವ ಕಾಯಕ ಹೊತ್ತು ಹೋರಾಟ ಮಾಡಿದ್ದಾರೆ. ಗಾಂಧೀಯ ಅಹಿಂಸೆಯನ್ನು ವಸಾಹತುಶಾಹಿ ಪ್ರಭುತ್ವವನ್ನು ವಿರೋಧಿಸುವುದು ಹಿಂಸೆಯ ನೆಲೆಯಲ್ಲೇ ಅನ್ನುವುದು ಮುಖ್ಯವಾಗಿ ಕಾಣುತ್ತದೆ.

ಸ್ವಾತಂತ್ರ್ಯ ಚಳುವಳಿಯ ಆಶಯದ ನೆಲೆಯಲ್ಲೇ ಅಹಿಂಸಾತ್ಮಕ ಪರಿಕಲ್ಪನೆಯನ್ನು ಒಪ್ಪಿಕೊಂಡು ಸತ್ಯಾಗ್ರಹಮಾಡಿ 'ಮೇರವಣಿಗೆ'ಯ ಸುದರ್ಶನ ಜೈಲು ಸೇರುತ್ತಾನೆ. ಸ್ವರಕ್ಷಣೆಗಾಗಿ ಸರಕಾರವನು ನಿರ್ಬಲಗೊಳಿಸುವುದಕ್ಕೆ ಹಿಂಸಾ ಮಾರ್ಗವನ್ನೊಪ್ಪಿಕೊಳ್ಳುವುದನ್ನು 'ಮಾಡಿ ಮಡಿದವರು' ಕಾದಂಬರಿಯ ವಿಶ್ವನಾಥ, ಹೇಮ ಮುಂತಾದ ಚಳುವಳಿಗಾರರನ್ನು ಕಾಣಬಹುದು.

ಗಾಂಧೀವಾದದ ಪರಿಭಾಷೆಗಳನ್ನು ಒಪ್ಪಿಕೊಂಡು ನೇರವಾಗಿ ಹೋರಾಟಕ್ಕೆ ಇಳಿಯದೆ, ಸಂಘ–ಆಶ್ರಮಗಳನ್ನೋ ಶಾಲೆಯನ್ನೋ ಸ್ಥಾಪಿಸಿಕೊಂಡು ಆ ಮೂಲಕ ಗ್ರಾಮೀಣ ಜನರಲ್ಲಿ ಗ್ರಾಮ ಸ್ವರಾಜ್ಯ ಕಲ್ಪನೆಯ ಆಶಯವನ್ನು ಜಾಗೃತಿಗೊಳಿಸುವುದು, 'ಔದಾರ್ಯದ ಉರುಳಲ್ಲಿ' ಬರುವ ರಾಧಕೃಷ್ಣ 'ಸ್ವಾತಂತ್ರ್ಯದೆಡೆಗೆ'ಯಲ್ಲಿ ಬರುವ ಶೇಖರ. 'ಕಾನೂರು ಹೆಗ್ಗಡತಿ'ಯಲ್ಲಿ ಬರುವ ಹೂವಯ್ಯ ಮುಂತಾದವರು ಪ್ರತಿನಿಧಿಸುತ್ತಾರೆ. ಸ್ತ್ರೀ ವಿಮೋಚನೆಯ ನೆಲೆಯಲ್ಲಿ ಸ್ತ್ರೀಯರಿಗೆ ಹೆಚ್ಚು ಪ್ರಾಧಾನ್ಯತೆಯನ್ನು (ಕೊಟ್ಟಿರುವುದನ್ನು) ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಕೊಟ್ಟಿರುವುದುನ್ನು ಕಾಣುತ್ತೇವೆ. ಈ ಚುಳುವಳಿಯಲಿ ಪಾಲುಗೊಳ್ಳುವ ಸ್ತ್ರೀಯರು ಸಂಸಾರಿಕ ಜವಾಬ್ದಾರಿಯನ್ನು ಮೀರಿ ದೇಶಸೇವೆಯಲ್ಲಿ ಪಾಲುಗೊಳ್ಳುವುದನ್ನು ಔದಾರ್ಯದ ಉರುಳಲ್ಲಿ ಮತ್ತು ಮಾಡಿ ಮಡಿದವರು ಕೃತಿಯಲ್ಲಿ ಗುರುತಿಸಬಹುದು. ಗಾಂಧೀವಾದವನ್ನು ಒಪ್ಪಿಕೊಂಡಂತಹ ಬರಹಗಾರರು ಸ್ವಾತಂತ್ರ್ಯ ಚಳುವಳಿಯ ಆಶಯದ ಜೊತೆಗೆ ಸುದಾರಣಾವಾದಿ ಮನೋಧರ್ಮವನ್ನು ಬಿಂಬಿಸುವ ಪಾತ್ರಗಳು ಅಂದರೆ ರಾಷ್ಟ್ರೀಯ ಪ್ರಜ್ಞೆಯುಳ್ಳ ನಾಯಕರು ಆಡುವುದು ಉಗ್ರರಾಷ್ಟ್ರವಾದ ಬಡತನದ ನಿವಾರಣೆಯ ಸಮತಾವಾದ ಇದನ್ನು ಚಿರಸ್ಮರಣೆ ಮತ್ತು ಜ್ವಾಲಾಮುಖಿಯ ಮೇಲೆ ಕೃತಿಗಳಲ್ಲಿ ಕಂಡು ಬರುತ್ತದೆ. ರಾಷ್ಟ್ರೀಯ ಪ್ರಜ್ಞೆಯುಳ್ಳ ನಾಯಕರು ಮಾಡುವುದು ಖಾಸಗಿ ಸುಖಸಂಪಾದನೆ ಅಥವಾ ದುಃಖ ನಿವಾರಣೆ ಜೊತೆಗೆ ಗಾಂಧೀವಾದಿಯ ಅವಿರ್ಭಾವ ಕಂಡುಬರುತ್ತದೆ. ಸರ್ವಸ್ವವನ್ನು ಬಲಿಕೊಟ್ಟು ನಿರಂತರ ಹೋರಾಟವನ್ನು ಮುಂದುವರಿಸುವ ಕೆಚ್ಚು, ಕಠೋರ ಕರ್ಕಶತೆಯ ಕೊರತೆ ಮಾತ್ರ ಕಾಣುತ್ತದೆ.

ಸಮಾಜವಾದಿ ಮತ್ತು ಲೋಹಿಯವಾದಿ ಚಿಂತನ ಬರಹಗಾರರು ಹಿಂಸೆಯನ್ನು ವೈಯಕ್ತಿಕ ನೆಲೆಯಲ್ಲಿಯೂ ಅಭಿವ್ಯಕಿಸುವುದು ಕಾಣಬಹುದು. ಅದು ಸಾಮೂಹಿಕ ನೆಲೆಯಲ್ಲಿ ಹಿಂಸಾತ್ಮಕವಾಗಿಯೇ ನಿರೂಪಿತಗೊಂಡಿದೆ. ಭಾರತೀಪುರದಲ್ಲಿ ದಾಸ್ಯ ಹಾಗೂ ಭಯಭೀತಿಗಳನ್ನು ಅಳಿಯದೆ ಅಳುಕಿನಂತೆ ಹಿಂಸೆ ನಿರೂಪಿತಗೊಂಡಿದೆ. ಭಾರತೀಪುರ ಜಗನ್ನಾಥ ತನ್ನ ಮನೆಯ ಅತ್ಯಂತ ಪವಿತ್ರ ಪೂಜಾವಸ್ತುವಾದ ನರಸಿಂಹ ಸಾಲಿಗ್ರಾಮವನ್ನು ತಂದು ಹೊಲೆಯರನ್ನು ಅದನ್ನು ಮುಟುವಂತೆ ಕಾಡಿ–ಬೇಡಿ ಮುಟ್ಟಿಸುತ್ತಾನೆ. ಆಗ ಪರಿಸ್ಥಿತಿ ಮತ್ತುಷ್ಟು ಕೆಡುತ್ತದೆ. ಆದರೆ ಅವರು ಹೆದರಿ ಕಂಗಾಲಾಗಿ ಹಿಂತೆಗೆಯುತ್ತಾರೆ. ಇಲ್ಲಿ ವ್ಯಕ್ತಗೊಳ್ಳುವ ಅಂಶವೆಂದರೆ ಸಾವಿರಾರೂ ವರ್ಷಗಳಿಂದ ಮನಸ್ಸಿನಲ್ಲೇ ಮನೆ ಮಾಡಿಕೊಂಡ ಹಿಂಸೆಯ ನೆಲೆಯನ್ನು ಮೀರುವಂತಾದರೂ ಮಾನಸಿಕ ಹಿಂಸೆಯಾಗಿ ಭಯ ಅತಂಕಕ್ಕೆ ಕಾರಣವಾಗುತ್ತದೆ. ಸಂಸ್ಕಾರದ ನಾರಾಯಣಪ್ಪ ಕ್ರೌರ್ಯದ ಪ್ರತೀಕದಂತೆ ಕಂಡರೂ ಅವನಿಗಿಂತ ಧೂರ್ತ ಮತ್ತು ಕ್ರೂರಿ ಪ್ರಾಣೇಶಾಚಾರ್ಯ, ಆತನ ವೈಚಾರಿಕ ಹಾದರ ಹೇಗೆ ತನ್ನ ಅಸ್ತಿತ್ವಕ್ಕಾಗಿ ಅದುವರೆಗೂ ಅಧುಮಿಟ್ಟ ಕಾಮವನ್ನು ಚಂದ್ರಿಯ ಮೇಲೆ ಪ್ರಯೋಗಿಸುವ ಹಿಂಸಾತ್ಮಕ ವ್ಯಕ್ತಿಯಾಗಿ ಕಾಣುತ್ತಾನೆ. "ಗಂಡಿನ ಫ್ಯಾಸಿಸ್ಟ್

ಧೋರಣೆಗಳು ಹೆಣ್ಣಿನ ಮೇಲೆ ಆಗುವ ಹಿಂಸೆಯನ್ನು ಹೇಳದೆ ಕೇವಲ ತಾವು ಅನುಭೋಗಿಸುವ ದೈಹಿಕ ಬದುಕಿನ ಮೇಲಷ್ಟೇ ತಮ್ಮ ಅನುಭವದ ಕೇಂದ್ರವನ್ನಿರಿಸಿ"೧೦ಕೊಂಡಿದ್ದರಿಂದ; ನವ್ಯ ಬರಹಗಾರರು ಹೆಣ್ಣನ್ನು ಭೋಗದ ವಸ್ತುವಾಗಿ ಗ್ರಹಿಸಿರುವುದರಿಂದ ಒಂದು ಹೆಣ್ಣು ಧ್ವನಿ ಸರಿಯಾಗಿ ವ್ಯಕ್ತಗೊಳ್ಳಲಾಗಿಲ್ಲ. ಹೆಣ್ಣುಗಳು ಕೇವಲ ಮಾನಸಿಕ ಹಿಂಸೆಯ ಮಟ್ಟದಲ್ಲೇ ನಿಂತು ಬಿಡುವಂತ ಪಾತ್ರಗಳನ್ನು ಚಿತ್ರಿಸಿದ್ದಾರೆ. ಇವರು ವೈಯುಕ್ತಿಕ ನೆಲೆಯಲ್ಲಿ ಅನುಭವಿಸಿದ ಹಿಂಸೆ ಸಮಾಜದ ಹಿಂಸೆಯೂ ಆಗಬಹುದು. ಒಬ್ಬ ವ್ಯಕ್ತಿ ಮತ್ತು ಸಮಾಜದ ನಡುವೆ ನಡೆಯುವ ಸಂಬಂಧಗಳಲ್ಲಿ ಗಂಡು–ಹೆಣ್ಣು ವ್ಯಕ್ತಿ–ವ್ಯಕ್ತಿ ಪ್ರದೇಶ– ಪ್ರದೇಶಗಳ ಮನಸ್ಸುಗಳ ನಡುವೆ ನಡೆಯುವ ನಿರಂತರ ಸಂಬಂಧಗಳ ಪ್ರಕ್ರಿಯೆಯಲ್ಲಿ ಹಿಂಸೆ ಸಹಜವಾಗಿ ವ್ಯಕ್ಯಗೊಳ್ಳುತ್ತದೆ. ಗಾಂಧಿವಾದವು ನವೋದಯ ಬರಹಗಾಗರಿಗೆ ಒಂದು ತಾತ್ವಿಕ ತತ್ವವೆಂದು ಗ್ರಹಿಸಿದಂತೆ; ನವ್ಯದವರು ಆರಂಭದಲ್ಲಿ ಅದೇ ಧಾಟಿಯಲಿತ್ತು ನಂತರ ಅದು ಲೋಹಿಯವಾದದ ಕಡೆ ತಿರುಗಿದಂತೆ ಸಾಹಿತ್ಯವು ಸಮಾಜಾಭಿಮುಖಿಯಾಗುವ ಕಡೆ ಚಲಿಸಲು ಪ್ರಾರಂಭ ಮಾಡಿತು. ಆದರೂ ಸಂಪೂರ್ಣವಾಗಿ ವ್ಯಕ್ತಿಯ ನೆಲೆಗೆ ಕೇಂದ್ರೀಕೃತಗೊಂಡಾಗ ಸಮಾಜವನ್ನು ನೊಡುವ ಹಿನ್ನೆಲೆಯಲಿ; ಲೋಹಿಯವಾದವನ್ನು ಸಂಪೂರ್ಣವಾಗಿ ಅವಲಂಬಿಸಲಿಲ್ಲ ಜಾತಿ ಭಾಷೆ ಮತ್ತು ಸಂಸ್ಕೃತಿಯನ್ನು ಬುಡಮೇಲು ಮಾಡುವ ಸ್ಥಿತಿಯಲ್ಲೇ ಅರ್ಥಮಾಡಿ ಕೊಂಡಿದ್ದರಿಂದ ಸಂವಹನಗೊಳ್ಳವಲ್ಲೇ ಸೋತ್ತದ್ದು ಮಾತ್ರ ವಿಪರ್ಯಾಸ. ಇದು ಕೆಳವರ್ಗದ ಸಂಸ್ಕೃತಿಯನ್ನು ಉದಾಸೀನ ಮಾಡಿದ್ದರಿಂದ ಜೊತೆಗೆ ಬ್ರಾಹ್ಮಣೀಕರಣಗೊಂಡ ಸಿದ್ಧಾಂತಗಳೇ ಹೆಚ್ಚಾಗಿ ಸಮಾಜ ವಿರೋಧಿ ನಿಲುವಗಳನ್ನು ಸಾಬೀತು ಪಡಿಸಿದರು ಈ ಬರಹಗಾರರ ಕೃತಿಗಳಲ್ಲಿ ಗಾಂಧಿವಾದದ ಚಿಂತನಾ ಕ್ರಮಗಳು ಸಹ ನಿರರ್ಥವಾಗುತ್ತವೆ. ಗಿರಿ ಅವರ ಗತಿ ಸ್ಥಿತಿ, ಲಂಕೇಶ ಅವರ ಬಿರುಕು, ತೇಜಸ್ವಿ ಅವರ ಚಿದಂಬರ ರಹಸ್ಯ ಕೃತಿಗಳು ವ್ಯವಸ್ಥೆಗೆ ತನ್ನನ್ನೂ ಒಗ್ಗಿಸಿಕೊಳ್ಳಲಾಗಿದೆ ಪಡುವ ಮಾನಸಿಕ ಹಿಂಸೆ, ಮತ್ತು ಆಧುನಿಕತೆ ಉಂಟುಮಾಡಿದ ಅಂತರಿಕ ಸಂಬಂಧಗಳ ಶೀಥಿಲತೆ, ಮನುಷ್ಯನನ್ನು ಪರಕೀಯನನ್ನಾಗಿ ಮಾಡಿದೆ. ಮುಸ್ಸಂಜೆಯ ಕಥಾಪ್ರಸಂಗ ಗ್ರಾಮೀಣ ಮೌಲ್ಯಗಳು ಆಧುನಿಕತೆಯ ಪ್ರವೇಶದಿಂದಾಗಿ ವ್ಯಕ್ತಿ ಸಮಾಜದ ನಡುವೆ ಉಂಟಾಗುವ ಮಾನಸಿಕ ಹಿಂಸೆ ಮನುಷ್ನನನ್ನು ಗೊಂದಲಮಯ ಪರಿಸ್ಥಿತಿಗೆ ದೊಡುತ್ತವೆ.

ಗಾಂಧೀವಾದದ ಪ್ರಮುಖ ಪರಿಭಾಷೆಯಾದ ಸ್ತ್ರೀ ವಿಮೊಚನೆ ಮತ್ತು ಜಾತಿ ನೆಲೆಯಲ್ಲಿ ಸೃಷಿಯಾದ ಅಸ್ಪೃಶ್ಯತೆಗೆ ದೇವನೂರು ಮಹಾದೇವ ಅವರ 'ಒಡಲಾಳ'ವು ಪ್ರತಿಕ್ರಿಯಿಸುತ್ತದೆ. ಸಾಕವ್ವ ಪಡುವ ಹಸಿವಿನ ಹಿಂಸೆ ಹುಂಜವನ್ನು ಕಳೆದುಕೊಂಡು ಹುಡುಕುವುದು, ತನ್ನ ಬದುಕಿನ ತನ್ನತನವನ್ನೇ ಅನ್ನುವುದು ವಿದಿತ. ಮುಳ್ಳೂರು ನಾಗರಾಜ ಅವರ 'ಮರಣ ಮಂಡಲ ಮಧ್ಯದೊಳಗೆ' ಕೃತಿ ಅಸ್ಪೃಶ್ಯತಾ ಕಲ್ಪನೆಯನ್ನು ವರ್ಣಸಂಕರ ಗೊಳಿಸುವುದರ ಮೂಲಕ ವ್ಯವಸ್ಥೆಯಲ್ಲಿ ಇರುವ ಹಿಂಸೆಯನ್ನು ಅನುಭವಿಸುವ ಮತ್ತು ವಿರೋಧಿಸುವ ಮನೋಧರ್ಮವೇ ಆಗಿದೆ. ಮ.ನ.ಜ ಅವರ 'ಮಾಗಿ' ತನ್ನ ಸಂಸಾರವನ್ನು ನೀಗಿಸಲು ನಡೆಸುವ ಸಂಘರ್ಷವು ತಾನು ಈ ಸಮಾಜದಲ್ಲಿನ ಪ್ರಭುತ್ವವನ್ನು ಪ್ರಶ್ನೆ ಮಾಡುವ ಮತ್ತು ಆ ಸಮಾಜವು ಉಂಟುಮಾಡುವ ಹಿಂಸೆಯನ್ನು ಅನುಭವಿಸುವ ಮತ್ತು ಅಹಿಂಸ ನೆಲೆಗೆ ತವಕಿಸುವ ಹಂಬಲವು ಅವಳಲ್ಲಿದೆ. ದಾರ್ಮಿಕ ಕಟ್ಟುಗಳಿಂದ ಸ್ತ್ರೀ ಸಹಜತೆಯ ಗೌರವದ ನೆಲೆಯ ಕಡೆಗೆ ಮುಖಮಾಡಲು ತವಕಿಸುವ ಸಾರಾ ಅಬೂಬಕರ್ ಅವರ ಚಂದ್ರಗಿರಿಯ ತೀರದಲ್ಲಿ ಸಹನಾ ಮತ್ತು ಘೋಷ ಕಾದಂಬರಿಯ ನಾಯಕಿಯರು ಪಡುವ ಹಿಂಸೆ, ಈ ಹಿಂಸೆಯನ್ನು ಮೀರಿ ಬಂಡಾಯ ಮನೋಧರ್ಮದ ಮೂಲಕ ಸಮನತೆಯ ಕಡೆ ನಡೆಯುವ ಪಾತ್ರಗಳು ಗಾಂಧೀವಾದದ ಪರಿಭಾಷೆಗಳಿಗೆ ಪ್ರತಿಕ್ರಿಯಿಸುತ್ತವೆ

## ನೋಡಿದ ಆಕರಗಳು


1. Gore M.S., Social movements and the paradigm of functional analyusis. economic and political weekly., 24.4.89.
2. ಪ್ರಾಂಜ್ ಫ್ಯಾನನ್., "ದ ರೆಜೆಡ್ ಆಫ್ ದ ಅರ್ತ್," ಪೆಂಗ್ವಿನ್ ಬುಕ್ಸ್ ಹಾರ್ ಮನ್ ಡವರ್ತ್ ೧೯೬೭. ಪುಟ: ೧೬೮.
3. ಅರವಿಂದ ಮಾಲಗತ್ತಿ "ದಲಿತಯುಗ ಮತ್ತು ಕನ್ನಡಸಾಹಿತ್ಯ" ಬೆಂಗಳೂರು. ಹೊಸದಿಕ್ಕು ಪ್ರಕಾಶನ. ೧೯೮೮. ಪುಟ: ೧೬೪.
4. ಡಿ.ಆರ್ ನಾಗರಾಜ್., "ಆಶೀಸ್ ನಂದಿ ವಿಚಾರಗಳು". ಅಕ್ಷರ ಪ್ರಕಾಶನ. ೧೯೮೬. ಪುಟ: ೩.
5. ಡಿ.ಆರ್ ನಾಗರಾಜ್ "ಆಶೀಸ್ ನಂದಿ ವಿಚಾರಗಳು" ಅಕ್ಷರ ಪ್ರಕಾಶನ. ೧೯೮೬ ಪುಟ: ೩.
6. ವಿ.ಎಂ ಇನಾಂದರ್ "ವಿಜಯಯಾತ್ರೆ" ಮೈಸೂರು; ಗೀತಾ ಬುಕ್‌ಹೌಸ್. ೧೯೭೮. ಪುಟ: ೫೬.
7. ಅ.ನ.ಕೃ "ಅಮರ ಆಗಸ್ಟ್" ಬೆಂಗಳೂರು; ಐ.ಬಿ.ಎಚ್. ಪ್ರಕಾಶನ. ೧೯೭೯. ಪುಟ: ೭೯.
8. ಬಸವರಾಜ ಕಟ್ಟೀಮನಿ "ಸ್ವಾತಂತ್ರ್ಯದೆಡೆಗೆ". ಮೈಸೂರು; ಸಹ್ಯಾದ್ರಿಯ ಪ್ರಕಾಶನ. ೧೯೮೦.
9. ಪುಟ: ೭೯.
10. ಡಾ. ಶಿವರಾಮ ಪಡಿಕ್ಕಲ್ "ನವೋದಯ ಸಾಹಿತ್ಯ ಸಾಮಾಜಿಕ ಸಂಕ್ರಮಣ ಮತ್ತು ಹಿಂಸೆ". ಲೇಖನ ಕ.ಸಾ.ಅ. ಬೆಂಗಳೂರು. ಪುಟ ೧೯೨.
11. William Raimond, "Marxism And Literature, Oxford London; c1977. p. 65.